ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 36 | ಸೆಪ್ಟಂಬರ್ 4, 1983 | ಬೆಲೆ 60 ಪೈಸೆ

'ಯುದ್ಧ ಮನೆಯ ಬಾಗಿಲಿಗೇ ಬಂದಿದೆ'

-ಶಾಂತಿ ಸಭೆಯಲ್ಲಿ ಸೂರ್ಯನಾರಾಯಣರಾವ್

'ಯುದ್ಧ ನಮ್ಮಿಂದ ದೂರದಲ್ಲೇನೂ ಇಲ್ಲ ಅದು ನಮ್ಮ ಮನೆಯ ಬಾಗಿಲಿಗೇ ಬಂದಿದೆ. ಅಮೇರಿಕ ಸಾಮ್ರಾಜ್ಯಶಾಹಿಗಳು ಹಿಂದೂಮಹಾಸಾಗರದಲ್ಲಿ ಮಿಲಿಟರಿ ನೆಲೆಯನ್ನು ಸ್ಥಾಪಿಸಿರುವುದು, ನಮ್ಮ ನೆರೆ ರಾಷ್ಟ್ರವಾದ ಪಾಕೀಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿರುವುದು, ದೇಶದ ಒಳಗೆ ವಿಚ್ಛಿದ್ರಕಾರೀ ಚಟುವಟಿಕೆಗಳನ್ನು ನಡೆಸುತ್ತಿರುವುದು ಇವೆಲ್ಲಾ ಯುದ್ಧವನ್ನು ದೇಶದ ಅಂಚಿಗೆ ತಂದು ನಿಲ್ಲಿಸಿವೆ'

ಎಂಬುದಾಗಿ ಶಾಸಕ ಹಾಗೂ ಸಿ. ಪಿ. ಐ. (ಎಂ) ಮುಖಂಡರಾದ ಕಾ। ಎಸ್. ಸೂರ್ಯನಾರಾಯಣರಾವ್ ಅವರು ಹೇಳಿದರು. ಅವರು ಸೆಪ್ಟಂಬರ್ 1ರಂದು ಬೆಂಗಳೂರಿನಲ್ಲಿ ಸಿ. ಪಿ. ಐ. (ಎಂ), ಸಿ. ಪಿ. ಐ. ಜನತಾ ಹಾಗೂ ಶಾಂತಿ ಸೌಹಾರ್ದತಾ ಸಂಘಟನೆಗಳು ಸಂಯುಕ್ತವಾಗಿ ಏರ್ಪಡಿಸಿದ್ದ ಶಾಂತಿ ದಿನಾಚರಣೆಯ ಸಭೆಯಲ್ಲಿ ಮಾತನಾಡುತ್ತಿದ್ದರು. ತಮ್ಮ ಭಾಷಣವನ್ನು ಮುಂದುವರಿಸಿದ ಅವರು 'ಬಂಡವಾಳಶಾಹೀ ಜಗತ್ತಿನಲ್ಲಿ ಆರ್ಥಿಕ ಬಿಕ್ಕಟ್ಟು ಆಳವಾಗಿ ಅಣು ಯುದ್ಧವನ್ನು ಅನಿವಾರ್ಯವಾಗಿಸಿಕೊಂಡು ಶಸ್ತ್ರಾಸ್ತ್ರಗಳನ್ನು ತಯಾರಿಸಿ ಮಾರಾಟ ಮಾಡಿ ಲಾಭಗಳಿಸಿ ಆ ಮೂಲಕ ತನ್ನ ಬಿಕ್ಕಟ್ಟಿನಿಂದ ಪಾರಾಗಲು ಯೋಚಿಸುತ್ತದೆ. ಅದೇ ರೀತಿಯಲ್ಲಿ ಅಮೇರಿಕನ್ ಸಾಮ್ರಾಜ್ಯ ಶಾಹಿ ಇಂದು ತನ್ನ ಯುದ್ಧ ಜಾಲವನ್ನು ಜಗತ್ತಿನಾದ್ಯಂತ ಹರಡಿ ಶಸ್ತ್ರಾಸ್ತ್ರಗಳು ಬಳಕೆಯಾಗುವಂತೆ ಮಾಡುತ್ತದೆ. ಸೋವಿಯತ್ ಯೂನಿಯನ್ ತನ್ನಲ್ಲಿರುವ ಅಣು ಅಸ್ತ್ರಗಳನ್ನು ಏಕ ಪಕ್ಷೀಯವಾಗಿ ನಾಶ ಮಾಡದಿದ್ದರೆ ಡಿಸೆಂಬರ್ 1 ರೊಳಗೆ ಯುರೋಪಿನಾದ್ಯಂತ ಅಣುಕ್ಷಿಪಣಿಗಳನ್ನು ಸ್ಥಾಪಿಸುವ ಬೆದರಿಕೆಯನ್ನು ಅಮೇರಿಕಾ ಹಾಕಿದೆ. ಆದ್ದರಿಂದ ಇಂದು ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಶಾಂತಿಗಾಗಿ ನಡೆಯುವ ಹೋರಾಟದಲ್ಲಿ ತನ್ನೆಲ್ಲಾ ಶಕ್ತಿಯೊಡನೆ ಭಾಗವಹಿಸಿ ಅದನ್ನು ಮುನ್ನಡೆಸಬೇಕಾಗಿದೆ' ಎಂದು ಹೇಳಿದರು.

ಸೆಪ್ಟಂಬರ್ 1ರಂದು ಸಂಜೆ 6.30 ಗಂಟೆಗೆ ಬೆಂಗಳೂರಿನ 'ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್' ಸಭಾಂಗಣದಲ್ಲಿ ಪ್ರಾರಂಭವಾದ 'ಶಾಂತಿ ದಿನಾಚರಣೆಯ' ಬಹಿರಂಗ ಸಭೆಯಲ್ಲಿ ಸುಮಾರು 500 ಮಂದಿ ಸೇರಿದ್ದರು. ಸಭೆಯ ಅಧ್ಯಕ್ಷತೆಯನ್ನು ವಿಜ್ಞಾನಿ ಹಾಗೂ ಕರ್ನಾಟಕ ರಾಜ್ಯ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ಅಧ್ಯಕ್ಷ ಶ್ರೀ ಎಂ. ಎ. ಸೇತುರಾವ್ ವಹಿಸಿದ್ದರು. ಅಧ್ಯಕ್ಷ ಭಾಷಣ ಮಾಡುತ್ತಿದ್ದ ಅವರು ಪ್ರಾಗ್‌ನಲ್ಲಿ ಇತ್ತೀಚಿಗೆ ನಡೆದ ಅಂತರ್‌ರಾಷ್ಟ್ರೀಯ ಶಾಂತಿ ಸಮ್ಮೇಳನದ ಪ್ರಮುಖ ಚರ್ಚೆಗಳನ್ನು, ಸಮ್ಮೇಳನದ ಅನುಭವಗಳನ್ನು ವಿವರಿಸಿದರು. ಯುದ್ಧ ವಿರೋಧೀ ಚಳವಳಿಗೆ ಮಹತ್ವಬರಲು ಕಾರಣವನ್ನು ಚರ್ಚಿಸುತ್ತಾ ರೇಗನ್‌ರವರ ಪರಿಮಿತ ನ್ಯೂಕ್ಲಿಯರ್ ಯುದ್ಧ, ವಿಶ್ವಾದ್ಯಂತ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವುದು, ಮಾರಕ ಶಸ್ತ್ರಾಸ್ತ್ರಗಳನ್ನು ಅಗಾಧ ಪ್ರಮಾಣದಲ್ಲಿ ತಯಾರಿಸುವುದು, ರಷ್ಯಾದೊಂದಿಗಿನ ವೈಷಮ್ಯ ಮುಂತಾದ ಧೋರಣೆಗಳೇ ಕಾರಣ ಎಂದು ತಿಳಿಸಿದರು.

ಸಭೆಗೆ ಅನಿರೀಕ್ಷಿತವಾಗಿ ಆಗಮಿಸಿದ್ದ ಸಚಿವ ಶ್ರೀ ಲಕ್ಷ್ಮಿ ಸಾಗರ್ ಅವರು ಮುಂದೆ ಏನಾಗರು ಯುದ್ಧ ನಡೆದರೆ ಅದು ಹಿಂದಿನ ಯುದ್ಧಗಳಂತಿರುವುದಿಲ್ಲವೆಂದೂ, ಇಡೀ ವಿಶ್ವವೇ ಸರ್ವನಾಶವಾಗುತ್ತದೆಂದು ಆದ್ದರಿಂದ ಇಂತಹ ಯುದ್ಧ ಯಾರಿಗೆ ಬೇಕು? ಯಾತಕ್ಕೆ ಬೇಕು? ಎಂದು ಪ್ರಶ್ನಿಸಿದರು.

ರಾಜ್ಯ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಡಿ. ಮಂಜುನಾಥ್ ಅವರು ಯುದ್ಧ ವಿರೋಧಿ ದಿನಾಚರಣೆ ತುಂಬಾ ಮುಖ್ಯವಾದುದು. ಅದನ್ನು ಬೆಂಗಳೂರಿನಲ್ಲಷ್ಟೇ ಅಲ್ಲ ರಾಜ್ಯದ ಎಲ್ಲಾ ಕಡೆಗಳಲ್ಲೂ ನಡೆಸಬೇಕು ಅದರಲ್ಲಿ ನನಗೆ ಆಸಕ್ತಿ ಇದೆ. ನನ್ನಿಂದ ಸಾಧ್ಯವಾದ ಎಲ್ಲಾ ಸಹಾಯವನ್ನು ಮಾಡುತ್ತೇನೆ ಎಂದು ಹೇಳಿದರು.

ಶಾಸಕರೂ, ಸಿ.ಪಿ.ಐ. ಕರ್ನಾಟಕ ರಾಜ್ಯ ಮಂಡಳಿ ಕಾರ್ಯದರ್ಶಿಗಳೂ ಆದ ಕಾ॥ ಎಂ. ಎಸ್. ಕೃಷ್ಣನ್ ಅವರು ತಮ್ಮ ಭಾಷಣದಲ್ಲಿ 'ಶಾಂತಿ ಚಳುವಳಿಯು ಕೆಲವರು ಆಪಾದಿಸುವಂತೆ ಕೆಲವರ, ಕೆಲವು ಪಕ್ಷಗಳ ಚಳವಳಿ ಅಲ್ಲ. ಕಮ್ಯುನಿಸ್ಟರ, ಪರರಾಷ್ಟ್ರ ನಿಷ್ಠೆಯಿರುವ ಪಕ್ಷಗಳ ಚಳವಳಿಯೂ ಅಲ್ಲ. ಇದು ವಿಶ್ವವ್ಯಾಪಿ ಚಳವಳಿ. ಎಲ್ಲ ವರ್ಗಗಳ, ಎಲ್ಲ ಮತಗಳ, ಎಲ್ಲ ಜನಾಂಗಗಳ ಜನತೆ ನಡೆಸುತ್ತಿರುವ ವಿಶಾಲವಾದ ಹೋರಾಟ—ಇದರಲ್ಲಿ ನಾವೆಲ್ಲರೂ ಒಂದಾಗಿ ಯುದ್ಧದ ಭೀಕರತೆಯನ್ನು ಎದುರಿಸಬೇಕಾಗಿದೆ. ಇಂದು ಯುದ್ಧಕ್ಕಾಗಿ, ಮಿಲಿಟರಿಗಾಗಿ ಆಗುತ್ತಿರುವ ವೆಚ್ಚವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದಲ್ಲಿ ಜಗತ್ತು ಅದ್ಭುತ ರೀತಿಯಲ್ಲಿ ಪ್ರಗತಿ ಹೊಂದುತ್ತದೆ ಎಂಬುದಾಗಿ ಅವರು ಹೇಳಿದರು.

ಜೀವನಾಶದ ಯುದ್ಧ ನಮಗೆ ಬೇಡ
ಶಾಂತಿ ಚಳವಳಿಗೆ ಮುನ್ನುಗ್ಗೋಣ

ಸಂಪಾದಕೀಯ

ಪಾಕಿಸ್ಥಾನದಲ್ಲಿ ಜನತಂತ್ರ ಚಳುವಳಿ

ಪಾಕಿಸ್ಥಾನದ ಜನತೆ ಪ್ರಜಾಪ್ರಭುತ್ವದ ಪುನರ್ ಸ್ಥಾಪನೆಗಾಗಿ ವ್ಯಾಪಕವಾದ ಹೋರಾಟ ನಡೆಸಿದ್ದಾರೆ. ಈ ಚಳುವಳಿಯಲ್ಲಿ ಎಲ್ಲ ಜನ ವಿಭಾಗ ಪಾಲ್ಗೊಂಡಿದೆ. ಪಾಕಿಸ್ಥಾನದಾದ್ಯಂತ ಈ ಚಳುವಳಿ ನಡೆಯುತ್ತಿದ್ದು ಜಿಯಾರವರ ಮಿಲಿಟರಿ ಸರಕಾರ ಗುಂಡಿನಿಂದ ಜನರ ಕೊಲೆ ಮಾಡುತ್ತಿದ್ದಾರೆ. ಅಬ್ದುಲ್ ಗಫಾರ್ ಖಾನ್‌ರಂತ ಮುದುಕರನ್ನು ಬಂಧನದಲ್ಲಿಟ್ಟಿದೆ.

ಭಾರತದಿಂದ ಸಿಡಿದುಹೋದಂದಿನಿಂದಲೂ ಅಂದರೆ ಕಳೆದ 37 ವರ್ಷಗಳಿಂದಲೂ ಪಾಕಿಸ್ಥಾನದ ಜನತೆ ಸ್ವಾತಂತ್ರ್ಯದ ಸಿಹಿಕಂಡಿಲ್ಲ, ಜನತಂತ್ರ್ಯದ ಅನುಭವ ಉಂಡಿಲ್ಲ. ಅಂದಿನಿಂದ ಇಂದಿನವರೆಗೂ ಬರೇ ಸೈನಿಕರ ಆಡಳಿತೆಗೆ ಒಳಗಾಗಿ ಎಲ್ಲ ನಾಗರೀಕ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ. ಈ ಹಿಂದೆ ಕೂಡ ಹಲವಾರು ಸಲ ಮಿಲಿಟರಿ ಆಡಳಿತೆಯ ವಿರುದ್ಧ ಹೋರಾಟಗಳು ನಡೆದಿವೆ. ಈ ಸಲದ ಹೋರಾಟ ತೀವ್ರ ಸ್ವರೂಪವನ್ನು ತಾಳಿದೆ.

ಪಾಕಿಸ್ಥಾನದ ಜನತೆ ಮಿಲಿಟರಿ ಆಡಳಿತೆಯ ವಿರುದ್ಧ ನಾಗರೀಕ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸಂಪೂರ್ಣ ಬೆಂಬಲ ನೀಡುತ್ತ ಈ ಹೋರಾಟಕ್ಕೆ ಭಾರತ ಸರಕಾರ ಬೆಂಬಲ ನೀಡಿರುವುದನ್ನು ಸ್ವಾಗತಿಸುತ್ತದೆ.

ಪಾಕ್‌ದೇಶದಲ್ಲಿ ಅಲ್ಲಿಯ ಜನತೆ ನಡೆಸುತ್ತಿರುವ ಈ ಹೋರಾಟಕ್ಕೆ ಇಂದು ಬಹಳ ಮಹತ್ವವಿದೆ. ಅಮೇರಿಕದ ಸಾಮ್ರಾಜ್ಯಶಾಹಿಗಳು, ಸಮತಾವಾದಿ ದೇಶವಾದ ಸೋವಿಯತ್ ರಷ್ಯಾ ಹಾಗೂ ಭಾರತ ದೇಶದ ಮೇಲೆ ಆಕ್ರಮಣ ನಡೆಸುವ ಸಲುವಾಗಿ ಪಾಕಿಸ್ಥಾನವನ್ನು ತನ್ನ ಯುದ್ಧದ ನೆಲೆಯನ್ನಾಗಿ ಮಾರ್ಪಡಿಸಲು ಪ್ರಾರಂಭದಿಂದಲೂ ಪ್ರಯತ್ನ ನಡೆಸುತ್ತ ಬಂದಿದೆ. ಭಾರತ ಮತ್ತು ರಷ್ಯಾ ದೇಶಗಳು ಅಮೇರಿಕಾದ ಸಾಮ್ರಾಜ್ಯಶಾಹಿಗಳ ಈ ಯುದ್ಧಕೋರ ನೀತಿಯ ವಿರುದ್ಧ ಎಷ್ಟು ಪ್ರತಿಭಟಿಸಿದರೂ ಕೂಡ ಅವುಗಳನ್ನು ಗಮನಿಸದೆ ಪಾಕಿಸ್ಥಾನದ ಮಿಲಿಟರಿ ಆಡಳಿತಗಳಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು- ಅಪಾರ ಹಣವನ್ನು ಒದಗಿಸುತ್ತಲೇ ಬಂದಿದೆ. ಪಾಕಿಸ್ಥಾನದಲ್ಲಿ ಸೈನಿಕರ ಆಡಳಿತೆಯ ಮುಂದುವರಿಕೆ, ಅಲ್ಲಿಯ ಜನತೆಗೆ ಪ್ರಜಾಪ್ರಭುತ್ವದ ಹಕ್ಕುಗಳ ನಿರಾಕರಣೆಯು ಏಶಿಯಾ ಖಂಡದಲ್ಲಿಯ ಶಾಂತಿಗೆ ಗಂಡಾಂತರಕಾರಿಯಾಗಿದೆ. ಜಗತ್ತಿನಾದ್ಯಂತ ಯುದ್ಧದ ವಿರೋಧ-ಶಾಂತಿಗಾಗಿ ನಡೆಯುತ್ತಿರುವ ಹೋರಾಟವನ್ನು, ಜನಾಭಿಪ್ರಾಯವನ್ನು ಕಡೆಗಣಿಸಿ, ಯುದ್ಧ ತಯಾರಿ ಮುಂದುವರಿಸುತ್ತಿರುವ ರೇಗನ್ ಸರಕಾರದ ನೀತಿಯನ್ನು ಮೊಟಕುಗೊಳಿಸಬೇಕಾದರೆ ಪಾಕಿಸ್ಥಾನದ ಜಿಯಾ ಸರ್ಕಾರವನ್ನು ಎದುರಿಸಿ, ಚುನಾವಣೆಯ ಮೂಲಕ ಆರಿಸಿ ಬರುವ ಸರಕಾರ ಅಸ್ತಿತ್ವದಲ್ಲಿ ಬರುವುದು ಅತ್ಯಗತ್ಯ. ಆದ್ದರಿಂದ ಪಾಕ್ ಜನತೆಯ ಈ ಹೋರಾಟಕ್ಕೆ ಸರ್ವ ಬೆಂಬಲ ನೀಡುವುದು ಅತ್ಯಗತ್ಯ.

'ಕನ್ನಡನಾಡು' ಪಕ್ಷದ ಉದಯ

ಕರ್ನಾಟಕದಲ್ಲಿ ಮತ್ತೊಂದು ಪ್ರಾದೇಶಿಕ ಪಕ್ಷ 'ಕನ್ನಡನಾಡು' ಉದಯವಾಗಿದೆ. ಬಿಜೆಪಿಯಿಂದ ಹೊರ ಹಾಕಲ್ಪಟ್ಟ ಎ. ಕೆ. ಸುಬ್ಬಯ್ಯನವರೇ ಅದರ ಜನ್ಮದಾತ.

ಕಳೆದ 36 ವರ್ಷಗಳ ಕಾಂಗ್ರೆಸ್ ಆಡಳಿತೆಯಿಂದ ಬೇಸತ್ತ ಜನತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯಂತ ತತ್ವ, ಧೋರಣೆಗೆ ಬದ್ಧವಾದ ಕ್ರಾಂತಿಕಾರಿ ಪಾರ್ಟಿಯ ನೇತೃತ್ವದಲ್ಲಿ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಟ್ಟುಗೂಡಿಸುವ ಅವಶ್ಯಕತೆಯನ್ನು ಕಾಣುತ್ತಿರುವಾಗ, ಜನರಲ್ಲುಂಟಾಗಿರುವ ಅಸಂತುಷ್ಟಿಯನ್ನು ಬೇರೆಡೆಗೊಯ್ಯುವ ದುರುಪಯೋಗಮಾಡಿಕೊಳ್ಳುವ ಪ್ರಯತ್ನವನ್ನ ಬಂಡವಾಳಶಾಹಿ ವ್ಯಕ್ತಿಗಳೂ, ಗುಂಪುಗಳೂ, ಶಕ್ತಿಗಳೂ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಜನರಲ್ಲಿರುವ ಅಸಮಾಧಾನವನ್ನು ಜಾತೀಯ, ಮತೀಯ, ಪ್ರಾದೇಶಿಕ, ಸಂಕುಚಿತ ರಾಷ್ಟ್ರಾಭಿಮಾನದ ಪಕ್ಷಗಳನ್ನು ರಚಿಸಲು ಉಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದನ್ನು ಗಮನಿಸುವುದಗತ್ಯ.

ಸಿನೆಮಾ ನಟ ಎನ್. ಟಿ. ರಾಮರಾವ್ ಅವರು ತಮ್ಮ ಪಕ್ಷಕ್ಕೆ ತೆಲುಗು ದೇಶಂ ಎಂದು ನಾಮಕರಣ ಮಾಡಿ ಪ್ರಾಂತೀಯ ಭಾವನೆಯ ಲಾಭ ಪಡೆದಿರುವುದನ್ನು ಕಂಡು ಉಲ್ಲಸಿತರಾದ ಎ. ಕೆ. ಸುಬ್ಬಯ್ಯನವರು ನಟ ರಾಜಕುಮಾರ್ ಅವರನ್ನು ತನ್ನ ಬಲೆಗೆ ಹಾಕಿಕೊಂಡು ಮೆರೆಯಬೇಕೆಂಬ ಅಭಿಲಾಷೆ ಹೊಂದಿದವರಾಗಿದರು. ಡಾ॥ ರಾಜಕುಮಾರ ಇವರ ಕೈ ಹಿಡಿಯಲು ನಿರಾಕರಿಸಿದಾಗ (ಬಂಗಾರಪ್ಪನವರೂ ಅಂಥದ್ದೇ ಅನುಭವ ಉಂಡಿದ್ದರು) "ಕನ್ನಡ ನಾಡಿನ" ಹೆಸರಿನಿಂದ ಕನ್ನಡಿಗರನ್ನು ಆಕರ್ಷಿಸಬಹುದೆಂಬ ಮಹೋದ್ದೇಶದಿಂದ ತಮ್ಮ ಪಕ್ಷಕ್ಕೆ ಕನ್ನಡ ನಾಡೆಂದು ನಾಮಕರಣ ಮಾಡಿದ್ದಾರೆ. ರಾಜಕಾರಣದಲ್ಲಿ ಸೋಲನ್ನೆ ಅನುಭವಿಸುತ್ತ ಬಂದಿರುವ ಬಂಗಾರಪ್ಪನವರ ಆಶೀರ್ವಾದವೂ ಸುಬ್ಬಯ್ಯನವರಿಗೆ ಇದ್ದಿರಬೇಕು. ಅದೇನೇ ಇರಲಿ. ಸುಬ್ಬಯ್ಯನವರ ಪಕ್ಷದ ನಿಲುವೇನೆಂಬುದನ್ನು ಸ್ವಲ್ಪ ತಿಳಿಯಬೇಕಾಗಿದೆ. ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರದ ವಿರುದ್ಧ ಹೋರಾಟ ಮುಂದುವರೆಸುವುದು ಅತ್ಯಗತ್ಯವಿದ್ದು, ಸುಬ್ಬಯ್ಯನವರ ಪಕ್ಷವೂ ಅಂಥದ್ದೇ ನಿಲುವು ತಾಳುವುದು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅತ್ಯಗತ್ಯ. ಮಗು ಹುಟ್ಟಿದೆ. ಅದಕ್ಕೆ ನಾಮಕರಣವಾಗಿದೆ. ಅದು ಹೇಗೆ ನಡೆಯುತ್ತದೆಂಬುದನ್ನು ಕಾದು ನೋಡೋಣ.

ಆರ್. ಚಂದ್ರ :

ಆರ್ಥಿಕ ಸಮೀಕ್ಷೆ :

ಆರನೆಯ ಅಂಕ್ಟಾಡ್ ಅಧಿವೇಶನ

-ಸೋಲು ಗೆಲುವು

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಳಗಿನ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಅವುಗಳೊಳಗೆ ವ್ಯಾಪಾರ ಮತ್ತು ಅಭಿವೃದ್ಧಿ ಸಂಬಂಧಗಳನ್ನು ಹೆಚ್ಚಿಸಲು ಆರನೆಯ ಅಂತರ್‌ರಾಷ್ಟ್ರೀಯ ಅಧಿವೇಶನವು (Unctad-VI) ಬೆಲ್‌ಗ್ರೇಡ್‌ನಲ್ಲಿ ಜೂನ್ 1983ರಲ್ಲಿ ನಡೆಯಿತು ಒಂದು ತಿಂಗಳ ದೀರ್ಘಾವಧಿಯಲ್ಲಿ ನಡೆದ ಈ ಅಧಿವೇಶನದಲ್ಲಿ ವಿಶ್ವಸಂಸ್ಥೆಯ 160 ರಾಷ್ಟ್ರಗಳು ಭಾಗವಹಿಸಿದ್ದವು. ಆರ್ಥಿಕ ಪುನರುಜ್ಜೀವನ ಹಾಗೂ ಅಭಿವೃದ್ಧಿ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಅಂತರ್ರಾಷ್ಟ್ರೀಯ ವ್ಯಾಪಾರಗಳಲ್ಲಿನ ಹಣಕಾಸು, ಸುಂಕ, ಸಂರಕ್ಷಣೆ ಇತ್ಯಾದಿ ಸಮಸ್ಯೆಗಳ ಕುರಿತು ಈ ಎರಡು ಬಣಗಳ ದೇಶಗಳೊಳಗೆ ಅರ್ಥಪೂರ್ಣ ಚರ್ಚೆ ಮತ್ತು ತೃಪ್ತಿಕರ ಸಂಧಾನ ಏರ್ಪಡಿಸುವುದೇ ಈ ಅಧಿವೇಶನದ ಮುಖ್ಯ ಉದ್ದೇಶವಾಗಿತ್ತು.

ಅಂತರ್ರಾಷ್ಟ್ರೀಯ ವ್ಯಾಪಾರ ಹೆಚ್ಚಿಸಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯೂ ಆರ್ಥಿಕ ಪ್ರಗತಿ ತ್ವರಿತಗೊಳಿಸಿ ಅವುಗಳನ್ನು ಆದಷ್ಟು ಬೇಗ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಸೇರಿಸಿ ಜಾಗತಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ 1964ರಲ್ಲಿಯೇ ವಿಶ್ವಸಂಸ್ಥೆಯ ಒಂದು ಪ್ರಮುಖ ಅಂಗಸಂಸ್ಥೆಯಾಗಿ 1964ರಲ್ಲಿ ಅಂಕ್ಟಾಡ್ ಅಸ್ತಿತ್ವಕ್ಕೆ ಬಂತು. ಅಂದಿನಿಂದ ಪ್ರತಿ ಮೂರು ವರ್ಷಗಳಿಗೊಮ್ಮೆ ಐದು ಅಂತರ್ರಾಷ್ಟ್ರೀಯ ಅಧಿವೇಶನಗಳು ನಡೆದು ಈಗ ಆರನೆಯದೂ ಮುಗಿಯಿತು. ಈ ಸಂದರ್ಭ ಇದರ ಸೋಲು ಗೆಲುವುಗಳನ್ನು ವಿಶ್ಲೇಷಿಸುವುದು ಸೂಕ್ತವೆನಿಸುವುದು.

ಜಾಗತಿಕ ಹೊಸ ಆರ್ಥಿಕ ವ್ಯವಸ್ಥೆ

ಅಂಕ್ಟಾಡ್ ಮೊದಲು ನಿರರ್ಥಕ ಸಂಸ್ಥೆಯಾಗಿದ್ದು, ಹತ್ತು ವರ್ಷಗಳ ನಂತರ 1974ರಲ್ಲಿ ವಿಶ್ವಸಂಸ್ಥೆಯು 34 ಅಂಶಗಳ ಆರ್ಥಿಕ ಹಕ್ಕುಗಳ ಸಂಹಿತೆಯೊಂದನ್ನು ಅಂಗೀಕರಿಸಿ ಜಾಗತಿಕ ಹೊಸ ಆರ್ಥಿಕ ವ್ಯವಸ್ಥೆಯ ನಿರ್ಮಾಣದ ಪರಿಕಲ್ಪನೆಯನ್ನು ಮುಂದಿಟ್ಟಂದಿನಿಂದ ಈ ಸಂಸ್ಥೆ ಪ್ರಮುಖ ಪಾತ್ರವಹಿಸುತ್ತಿದೆ. ಈ ಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಭಾರತವೂ ಸೇರಿ 77 ರಾಷ್ಟ್ರಗಳ ಗುಂಪು (ಈಗ 125 ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು) ಜಗತ್ತಿನ ಶ್ರೀಮಂತ ಹಾಗೂ ಬಡ ರಾಷ್ಟ್ರಗಳೊಳಗಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ, ಬಗೆಹರಿಸುವಲ್ಲಿ ಮತ್ತು ಅವುಗಳೊಳಗೆ ಆರ್ಥಿಕ ಸಹಕಾರ ಏರ್ಪಡಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ವಿಶ್ವಸಂಸ್ಥೆ ಅಂಗೀಕರಿಸಿದ ಆರ್ಥಿಕ ಹಕ್ಕುಗಳ ಕೆಲವು ಮುಖ್ಯಾಂಶಗಳನ್ನು ಪರಿಶೀಲಿಸಿದರೆ, ಅಂಕ್ಟಾಡ್ ಸಾಧಿಸಬೇಕಾದುದೇನು ಎಂದು ಇನ್ನೂ ಸ್ಪಷ್ಟವಾಗುವುದು.

1. ಪ್ರತಿ ಸದಸ್ಯ ರಾಷ್ಟ್ರಕ್ಕೂ ತನ್ನ ಸಂಪತ್ತು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಲು ಸರ್ವಕಾಲದಲ್ಲಿಯೂ ಪರಿಪೂರ್ಣ ಸಾರ್ವಭೌಮ ಹಕ್ಕು ಇರುವುದು.

2. ತನ್ನ ದೇಶದಲ್ಲಿರುವ ವಿದೇಶಿ ಬಂಡವಾಳ ಹೂಡುವಿಕೆಯ ಮೇಲೆ, ಬಹುರಾಷ್ಟ್ರೀಯ ಸಂಸ್ಥೆಗಳ ಮೇಲೆ ನಿಯಂತ್ರಣ, ಅಧಿಕಾರ ಚಲಾಯಿಸಬಹುದು. ಅವುಗಳನ್ನು ರಾಷ್ಟ್ರೀಕರಿಸಬಹುದು. ವಿದೇಶಿ ಆಸ್ತಿಯನ್ನು, ಒಡೆತನವನ್ನು ವರ್ಗಾಯಿಸಬಹುದು ಅಥವಾ ಸ್ವಂತಕ್ಕೆ ಬಳಸಬಹುದು.

3. ಬಹುರಾಷ್ಟ್ರೀಯ ಸಂಸ್ಥೆಗಳು ತಾವು ಹೋದ ದೇಶಗಳ ಆಂತರಿಕ ವಿಷಯಗಳಲ್ಲಿ ಕೈಹಾಕಕೂಡದು.

4. ಆಹಾರಧಾನ್ಯ, ಕೈಗಾರಿಕಾ ಕಚ್ಚಾವಸ್ತು, ತೈಲ-ಅದುರು ಖನಿಜ ವಸ್ತು ಇತ್ಯಾದಿಗಳನ್ನು ಪ್ರಾಥಮಿಕವಾಗಿ ಉತ್ಪಾದಿಸುವ ದೇಶಗಳು ತಮ್ಮೊಳಗೇ ಸಂಘಟನೆಗೊಳ್ಳಲು ಸಂಬಂಧಪಟ್ಟ ಪ್ರತಿ ಸದಸ್ಯದೇಶಕ್ಕೂ ಹಕ್ಕು ಇರುವುದು. ತಮ್ಮ ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿಯಿಂದ ಪ್ರಯೋಜನ ಪಡೆಯಲು ಅಧಿಕಾರ ಇದೆ.

5 ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ನ್ಯಾಯಯುತವಾದ ಲಾಭಗಳಿಕೆಗೆ ಮತ್ತು ವಿಶೇಷ ಅಚ್ಚುಮೆಚ್ಚಿನ ರಾಷ್ಟ್ರ (ರಿಯಾಯಿತಿ ಪಡೆಯಲು) ಎಂದು ಪರಿಗಣಿಸಲ್ಪಡುವ ಹಕ್ಕು ಅಭಿವೃದ್ಧಿ ಹೊಂದುತ್ತಿರುವ ಎಲ್ಲಾ ದೇಶಗಳಿಗೂ ಇದೆ.

6. ಸಮುದ್ರತೀರದ ಸಂಪನ್ಮೂಲಗಳನ್ನು ಶಾಂತಿಯುತ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕೆಂಬ, ಅವುಗಳ ಪ್ರಯೋಜನಗಳನ್ನು ಎಲ್ಲಾ ರಾಷ್ಟ್ರಗಳಿಗೂ ಸಮಾನವಾಗಿ ಅನುಭವಿಸುವ ಹಕ್ಕುಗಳನ್ನು ಗೌರವಿಸಲಾಗಿದೆ.

ಜಾಗತಿಕ ಅಸಮಾನತೆ

ಆದರೆ, ಈ ಮೇಲಿನ ಆರ್ಥಿಕ ಹಕ್ಕುಗಳನ್ನು ಚಲಾಯಿಸಿ, ಅವುಗಳನ್ನಾಧರಿಸಿದ ಹೊಸ ಆರ್ಥಿಕ ವ್ಯವಸ್ಥೆ ಹಾಗೂ ಅಭಿವೃದ್ಧಿಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ ಅಭಿವೃದ್ಧಿಹೊಂದುತ್ತಿರುವ ಹೆಚ್ಚಿನ ಬಡರಾಷ್ಟ್ರಗಳಿಗೆ ಇದೆಯೇ? ಎರಡನೇ ಜಾಗತಿಕ ಯುದ್ಧಾನಂತರ ರಾಜಕೀಯ ಸ್ವಾತಂತ್ರ್ಯಪಡೆದ ಈ ಬಡರಾಷ್ಟ್ರಗಳಲ್ಲಿ ಹೆಚ್ಚಿನವುಗಳು ವಾಸ್ತವವಾಗಿ ಆರ್ಥಿಕವಾಗಿ ಇನ್ನೂ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ರಾಷ್ಟ್ರಗಳ ಅಧೀನ ಅವಲಂಬಿತ-ಹೊಸ ವಸಾಹತುರಾಷ್ಟ್ರಗಳಾಗಿಯೇ ಉಳಿದಿವೆ. ಪರಿಣಾಮವಾಗಿ ಜಾಗತಿಕ ಆರ್ಥಿಕ ಅಸಮಾನತೆ ಇನ್ನೂ ಉಳಿದಿದೆ. ಹೆಚ್ಚುತ್ತಿದೆ. ಉದಾಹರಣೆಗೆ 1978ರಲ್ಲಿ ಜಗತ್ತಿನ ಶೇ, 13ರಷ್ಟು ಜನಸಂಖ್ಯೆ ಇರುವ ಅಮೇರಿಕ (ಯು.ಎಸ್.ಎ)ವೂ ಸೇರಿದಂತೆ 25 ಶ್ರೀಮಂತ ರಾಷ್ಟ್ರಗಳು ಜಗತ್ತಿನ ಶೇ. 60ರಷ್ಟು ಆದಾಯ ಪಡೆದಿವೆ. ಇಲ್ಲಿನ ಜನರು ಸರಾಸರಿ ವಾರ್ಷಿಕ ಆದಾಯ 7000 ಡಾಲರ್ ಮತ್ತು ಅದಕ್ಕಿಂತಲೂ ಹೆಚ್ಚಾಗಿದೆ.

ಜಗತ್ತಿನ ಅರ್ಧಾಂಶದಷ್ಟು ಜನಸಂಖ್ಯೆ ಇರುವ ಭಾರತವೂ ಸೇರಿ 36 ಅತ್ಯಂತ ಬಡ ರಾಷ್ಟ್ರಗಳ ಜನರು ಜಗತ್ತಿನ ಶೇ. 5ರಷ್ಟು ಮಾತ್ರ ಆದಾಯ ಪಡೆದಿದ್ದಾರೆ. ಅವರ ಸರಾಸರಿ ವಾರ್ಷಿಕ ಆದಾಯ 300 ಮತ್ತು ಅದಕ್ಕಿಂತಲೂ ಕಡಿಮೆಯಾಗಿದೆ.

ಜಾಗತಿಕ ಉತ್ಪಾದನೆ ಹಾಗೂ ವ್ಯಾಪಾರ ವ್ಯವಹಾರಗಳ ಶೇ. 75-80ರಷ್ಟು ಅಲ್ಪಸಂಖ್ಯಾತ ಶ್ರೀಮಂತ ರಾಷ್ಟ್ರಗಳೊಳಗೇಕೇಂದ್ರಿಕೃತವಾಗಿದೆ. ಬಡತನ, ಅನಕ್ಷರತೆ. ನಿರುದ್ಯೋಗ, ಅನಾರೋಗ್ಯ, ಆರ್ಥಿಕಹಿನ್ನಡೆ ಇತ್ಯಾದಿ ಬಹುಸಂಖ್ಯಾತ ಬಡ ರಾಷ್ಟ್ರಗಳಲ್ಲಿಯೇ ಕೇಂದ್ರೀಕೃತವಾಗಿವೆ; ಜಾಗತಿಕ ಅಸಮಾನತೆಯು ಸ್ಫೋಟಕ ಸ್ಥಿತಿಯಲ್ಲಿದ್ದು, ವಿಶ್ವಶಾಂತಿಗೆ ಅಪಾಯವಾಗಿದೆ.

ಅಂಕ್ಟಾಡಿನ ಸೋಲು

ಶ್ರೀಮಂತ ಹಾಗೂ ಬಡರಾಷ್ಟ್ರಗಳೊಳಗಿನ ಅಪವಾದವಾಗ ಅಸಮಾನತೆಯನ್ನು ಅವುಗಳೊಳಗಿನ ಪರಸ್ಪರ ಆರ್ಥಿಕ ಸಹಾಯ, ಸಹಕಾರ ಮತ್ತು ವ್ಯಾಪಾರಗಳಿಂದ ಕಡಿಮೆ ಮಾಡಲು, ಕ್ರಮೇಣ ಪರಿಪೂರ್ಣವಾಗಿ ಹೋಗಲಾಡಿಸಲು ಅಂಕ್ಟಾಡ್ ಕಳೆದ 20 ವರ್ಷಗಳಲ್ಲಿ ತೀವ್ರ ಸೋಲನ್ನನುಭವಿಸಿದೆ. ಆರನೆಯ ಅಂಕ್ಟಾಡ್ ಕೂಡಾ ತನ್ನ ಗುರಿ ಸಾಧಿಸಲು ಸೋತಿದೆ.

ಅಭಿವೃದ್ಧಿ ಹೊಂದುತ್ತಿರುವ ಬಡ ರಾಷ್ಟ್ರಗಳು ಉತ್ಪಾದಿಸುತ್ತಿರುವ ಪ್ರಾಥಮಿಕ ಸರಕು ಸಾಮಗ್ರಿಗಳ ಬೆಲೆಗಳು ಕಳೆದ 50ವರ್ಷಗಳಿಗಿಂತ ಈ ವರ್ಷ ಅತ್ಯಂತ ಕೆಳಮಟ್ಟಕ್ಕಿಳಿದಿವೆ. ಪರಿಣಾಮವಾಗಿ, ವಿಶ್ವಸಂಸ್ಥೆಯ ಅಧ್ಯಯನದಂತೆ 1980-82ರ ಅವಧಿಯಲ್ಲಿ ಈ ದೇಶಗಳ ರಫ್ತುಗಳಿಕೆಯಲ್ಲಿ 21 ಬಿಲಿಯ ಡಾಲರ್(ರೂ 21,000 ಕೋಟಿ) ಇಳಿಯಿತು. ಇವುಗಳ ರಫ್ತುಗಳಿಕೆಯನ್ನು ಸ್ಥಿರಗೊಳಿಸಲು ಮತ್ತು ಹೆಚ್ಚಿಸಲು ಸರಕುಗಳ ಸಾಮಾನ್ಯ ನಿಧಿ ರಚಿಸುವ ಸಲಹೆಯನ್ನು ಅಭಿವೃದ್ಧಿ ಹೊಂದಿದಬಂಡವಾಳಶಾಹಿರಾಷ್ಟ್ರಗಳೂ ಗಳ ನೇತಾರ ಅಮೇರಿಕ ನಿರಾಕರಿಸಿತು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೂ ಈ ಸಲಹೆಯನ್ನು ಸಾಕಷ್ಟು ಸಂಖ್ಯೆಯಲ್ಲಿ ಅಂಗೀಕರಿಸಲಿಲ್ಲ.

ಬಡರಾಷ್ಟ್ರಗಳ ರಫ್ತುವ್ಯಾಪಾರ ಹೆಚ್ಚುವಂತೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ಸಂರಕ್ಷಣಾತ್ಮಕ ಸುಂಕದ ಗೋಡೆಯನ್ನು ಇಳಿಸಬೇಕೆಂಬ ಸಲಹೆಗೂ ಅಮೇರಿಕ ತನ್ನ ತೀವ್ರ ವಿರೋಧ ವ್ಯಕ್ತಪಡಿಸಿತು. ಪ್ರತಿಯಾಗಿ, ತಾವು ಸುಂಕದಗೋಡೆ ಇಳಿಸಬೇಕಾದರೆ ಬಡ ರಾಷ್ಟ್ರಗಳು ತಮ್ಮ ಸುಂಕದಗೋಡೆ ಇಳಿಸಲಿ ಎಂದು ಸವಾಲು ಹಾಕಿವೆ.

ಇದರಿಂದಾಗಿ, ಈ ಶ್ರೀಮಂತರಾಷ್ಟ್ರಗಳು ಜಾಗತಿಕ ಅಸಮಾನತೆ ತಮ್ಮ ಹಿತಾಸಕ್ತಿಯಿಂದ ಅಗತ್ಯ, ಅನಿವಾರ್ಯ ಎಂದೇ ಪರಿಗಣಿಸುತ್ತಿವೆ. ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಅವುಗಳು ಸ್ವಲ್ಪವೂ ಸಹಕರಿಸುತ್ತಿಲ್ಲ.

ಅಭಿವೃದ್ಧಿಹೊಂದಿದ ದೇಶಗಳು ತಮ್ಮ ವಾರ್ಷಿಕ ರಾಷ್ಟ್ರೀಯ ಆದಾಯದ ಕೇವಲ ಶೇ. 0.15ರಷ್ಟು ಬಡ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗಾಗಿ ನೆರವು ನೀಡಬೇಕೆಂದು ಆರನೆಯ ಅಂಕ್ಟಾಡ್ ಕರೆಕೊಟ್ಟಿತು. (ಹಿಂದೆ ಶೇ. 1ರಷ್ಟು ನೆರವು ನೀಡಲು ಕರೆಕೊಟ್ಟಿತ್ತು) ಇದಕ್ಕೂ ಬಂಡವಾಳಶಾಹಿ ದೇಶಗಳ ಪರವಾಗಿ ಅಮೇರಿಕದ ವಿರೋಧ! ಯಾರಿಗೆ, ಯಾವಾಗ, ಎಷ್ಟು, ಯಾಕೆ, ಹೇಗೆ ನೆರವು ನೀಡಬೇಕೆನ್ನುವುದು ತಮಗೆ ಬಿಟ್ಟದ್ದು ಎಂದು ಅಮೇರಿಕದ ವಾದ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ರಫ್ತು ಸ್ಥಗಿತಗೊಂಡು ಇಳಿಮುಖವಾಗಿ, ಆರ್ಥಿಕ ಅಭಿವೃದ್ಧಿಗೆ ಆಮದು ಮತ್ತು ವಿದೇಶಿ ನೆರವುಗಳ ಅವಲಂಬನೆ ಹೆಚ್ಚುತ್ತಿದ್ದು, ಸಾಲದ ಹೊರೆ ಭಾರವಾಗುತ್ತಿದೆ. ಈ ದೇಶಗಳು ಅಂತರಾಷ್ಟ್ರೀಯ ಹಣ ಮರುಪಾವತಿಯ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್.) ಒಂದೇ ತಾತ್ಕಾಲಿಕ ಹಣಕಾಸು ಪೂರೈಕೆ ನೀಡುವುದು. ಈ ಸಂಸ್ಥೆಯ ಸಾಲ ನೀಡಿಕೆಯ ಧೋರಣೆಗಳು, ಶರತ್ತುಗಳು ಶ್ರೀಮಂತ ಬಂಡವಾಳಶಾಹಿ ರಾಷ್ಟ್ರಗಳ ಪರವಾಗಿಯೇ ಇರುವುವು, ಇದನ್ನು ಪುನರಚಿಸಬೇಕೆಂಬ ಸಲಹೆಗೆ ಅಮೇರಿಕ ಅಸಮ್ಮತಿಸಿತು.

ಅಭಿವೃದ್ಧಿ ಹೋದುತ್ತಿರುವ ದೇಶಗಳಿಗೆ ಬೇಕಾದ ಸೂಕ್ತ ತಾಂತ್ರಿಕ ನೆರವಿನ ಕುರಿತೂ ಅಂಕ್ಟಾಡ್ ಅಧಿವೇಶನ ಪ್ರಗತಿ ಸಾಧಿಸಲಿಲ್ಲ, ಇಂದಿಗೂ ಈ ದೇಶಗಳಲ್ಲಿ ಬಂಡವಾಳಶಾಹಿ ರಾಷ್ಟ್ರಗಳು ಮತ್ತವುಗಳ ಬಹುರಾಷ್ಟ್ರೀಯ ಸಂಸ್ಥೆಗಳು ಅಪ್ರಯೋಜಕ, ಅನಗತ್ಯ. ಹಾಗೂ ಅಪಾಯಕಾರಿ ತಂತ್ರಜ್ಞಾನ, ವಿಜ್ಞಾನಗಳನ್ನೇ ಹರಡುತ್ತಿದೆ. ಮತ್ತು ಅಗತ್ಯವಾದವುಗಳನ್ನು ನಿರಾಕರಿಸುತ್ತಿದೆ. ಉದಾ : ಬೇಡದ ಔಷಧಿ ಸಾಮಗ್ರಿಗಳ ಮಾರಾಟ; ಅಣು ಇಂಧನಕ್ಕೆ ಅಗತ್ಯ ವಸ್ತುಗಳ, ತಾಂತ್ರಿಕತೆಯ ಸರಬರಾಜಿಗೆ ನಿರಾಕರಣೆ.

ಸೋಲಿನ ಕಾರಣ, ಮೂಲಭೂತ ಪ್ರಶ್ನೆ

ಅಂಕ್ಟಾಡ್‌ನ 20 ವರ್ಷಗಳ ಸತತ ಪ್ರಯತ್ನಗಳ ಸೋಲಿಗೆ ಕೆಲವು ಮೂಲಭೂತ ಕಾರಣಗಳನ್ನು ಪರಿಶೀಲಿಸಬೇಕು.

ಜಗತ್ತಿನ ಮೂರನೇ ಒಂದು ಭಾಗದ ಜನರು ಸಮಾಜವಾದಿ ವ್ಯವಸ್ಥೆಯನ್ನು ಅಂಗೀಕರಿಸಿದ್ದಾರೆ. ಸ್ವಾತಂತ್ರ್ಯ, ಸ್ವಾವಲಂಬನೆ, ಯೋಜನಾ ಬದ್ಧ ಆರ್ಥಿಕ ಅಭಿವೃದ್ಧಿ ಉತ್ಪಾದನಾ ವಿಧಾನಗಳ ಮೇಲೆ ಸಾಮೂಹಿಕ ಒಡೆತನ, ಸಮಾನ ಅವಕಾಶ, ಖಾಸಗೀ ಆಸ್ತಿ ಮತ್ತು ಲಾಭಗಳಿಂದ ವಿಮೋಚನೆ, ಸಂಪತ್ ಸಮೃದ್ಧಿ, ಶ್ರಮಿಕವರ್ಗದ ಪ್ರಭುತ್ವ, ಇತ್ಯಾದಿಗಳು ಸಮಾಜವಾದಿ ವ್ಯವಸ್ಥೆಯ ಕೊಡುಗೆಗಳು, ಪರಿಣಾಮವಾಗಿ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯು ಸಂಕುಚಿತಗೊಂಡಿದೆ. ಸಾಮ್ರಾಜ್ಯಶಾಹಿ ದೇಶಗಳು ತಮ್ಮ ವಸಾಹತುಗಳನ್ನು ಕಳೆದುಕೊಂಡಿದೆ. ತಮ್ಮ ಲಾಭ, ಅಭಿವೃದ್ಧಿಗಳಿಗಾಗಿ ಹೊಸತಾಗಿ ಸ್ವತಂತ್ರವಾದ ಸಮಾಜವಾದಿಯೇತರ ದೇಶಗಳನ್ನು ತಮ್ಮ ಸಾಲ ಸಹಾಯ, ಸಹಕಾರ, ವ್ಯಾಪಾರ, ಕೈಗಾರಿಕೆ, ತಂತ್ರಜ್ಞಾನ, ಸಂಸ್ಕೃತಿಗಳಿಂದ ಹೊಸ ವಸಾಹತುಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿವೆ.

ಎರಡನೆಯ ಯುದ್ಧಾನಂತರ ತಮ್ಮ ಆರ್ಥಿಕ ಪುನರುಜ್ಜೀವನಕ್ಕಾಗಿ ರಚಿಸಿಕೊಂಡ ವಿಶ್ವ ಬ್ಯಾಂಕ್ (I.B.R.D.), ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ (IMF), ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಸುಂಕಗಳ ಕುರಿತಾದ ಸಾಮಾನ್ಯ ಒಪ್ಪಂದ (GATT), ಇತ್ಯಾದಿ ಸಂಸ್ಥೆಗಳ ಕಾರ್ಯಕಲಾಪಗಳನ್ನು ಕ್ರಮೇಣ ಹೊಸತಾಗಿ ಸ್ವತಂತ್ರಗೊಂಡ ಬಡರಾಷ್ಟ್ರಗಳಿಗೂ ವಿಸ್ತರಿಸುತ್ತಾ ಅವುಗಳ

(7ನೇ ಪುಟ ನೋಡಿ)

ಹೊಸ ಪಂಚಾಯತಿ ಮಸೂದೆಯ ರೂಪರೇಶೆ

—ಎನ್ಕೆ

ಅಧಿಕಾರ ವಿಕೇಂದ್ರೀಕರಣ ಮಾಡುವ ಉದ್ದೇಶದಿಂದ ಕರ್ನಾಟಕ ರಾಜ್ಯದ ಜನತಾ ಸರಕಾರ ಸದ್ಯದ ವಿಧಾನ ಸಭೆಯಲ್ಲಿ ಜಿಲ್ಲಾ ಪರಿಷತ್ತು ಮಂಡಲ ಪಂಚಾಯತಿ ಮತ್ತು ನ್ಯಾಯಪಂಚಾಯತಿಗಳ ಮಸೂದೆ (1983) ಎಂಬ ಜಿಲ್ಲೆಗೊಂದು ಹೊಸ ವ್ಯವಸ್ಥೆಯ ರೂಪಕೊಡುವ ಮಸೂದೆಯೊಂದನ್ನು ಮಂಡಿಸಿ, ಅದರಲ್ಲಿ ತಿದ್ದುಪಡಿಗಳನ್ನು ಸೂಚಿಸಲು ಸೆಲೆಕ್ಟ್ ಕಮಿಟಿಗೆ ಅದನ್ನು ಒಪ್ಪಿಸಿದೆ. ಈ ಮಸೂದೆಗೆ ಯಾವ ತಿದ್ದುಪಡಿ ತರಬೇಕೆಂಬ ವಿಚಾರವನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಯೋಚಿಸುತ್ತಿದ್ದು ಅದನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು. ಆದರೆ ಓದುಗರಿಗೆ ಸಹಾಯವಾಗಲೆಂಬ ದೃಷ್ಟಿಯಿಂದ ಈ ಮಸೂದೆಯ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಈ ಮಸೂದೆಯಂತೆ ಜಿಲ್ಲೆಗೊಂದು ಜಿಲ್ಲಾ ಪರಿಷತ್ತು ರಚನೆಯಾಗುತ್ತದೆ. ಅದರ ಕೆಳಗೆ 15–20 ಸಾವಿರ ಜನಸಂಖ್ಯೆಗೊಂದು ಪಂಚಾಯತಿ ಮಂಡಲ ರಚನೆಯಾಗುತ್ತದೆ. ಪ್ರತಿಯೊಂದು ಮಂಡಲಕ್ಕೆ ಒಂದು ನ್ಯಾಯ ಪಂಚಾಯತಿಯನ್ನೂ ರಚಿಸಲಾಗುತ್ತದೆ.

ಈಗ ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಗಳೂ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳೂ ಹೋಗುತ್ತವೆ. ಅವುಗಳ ಬದಲಾಗಿ ಮೇಲೆ ಸೂಚಿಸಿದ ಪರಿಷತ್ತು ಮತ್ತು ಮಂಡಲಿಗಳು ಸ್ಥಳೀಯ ಸಂಸ್ಥೆಗಳಾಗಿ ಹುಟ್ಟಿಕೊಳ್ಳುತ್ತವೆ. ಆದರೆ ಸದ್ಯ ಅಸ್ತಿತ್ವದಲ್ಲಿರುವ ನಗರ ಸಭೆ ನಗರ ಕಾರ್ಪೊರೇಶನ್‌ಗಳಿಗೆ ಯಾವುದೇ ಧಕ್ಕೆಯಿಲ್ಲ. ಆದರೆ ಇಂಥ ನಗರ ಸಭೆಗಳನ್ನು ಜಿಲ್ಲಾ ಪರಿಷತ್ತುಗಳೊಳಗೆ ಸೇರಿಸುವ ಅಥವಾ ಮಂಡಲಿ ಪಂಚಾಯತಿಯನ್ನಾಗಿ ಪರಿವರ್ತಿಸುವ ಅಧಿಕಾರವನ್ನು ಸರಕಾರ ಹೊಂದಿದೆ.

ಈ ಹೊಸ ಮಸೂದೆಗನುಸಾರವಾಗಿ 15ರಿಂದ 20 ಸಾವಿರ ಜನಸಂಖೆಗೆ ಒಂದರಂತೆ ಮಂಡಲ ಪಂಚಾಯತಿ ಅಸ್ತಿತ್ವದಲ್ಲಿ ಬರುವುದು. ಸಾವಿರಕ್ಕೆ ಒಬ್ಬರಂತೆ ಇದರಲ್ಲಿ 15 ರಿಂದ 20 ಸದಸ್ಯರಿರುವರು. ಶೇ 30ರಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಒಂದು ಸ್ಥಾನ ಹರಿಜನರಿಗೆ, ಇನ್ನೊಂದು ಹಿಂದುಳಿದವರಿಗೆ–ಗಿರಿಜನರಿಗೆ (ಅವರ ಜನ ಸಂಖ್ಯೆಯು ಐವತ್ತಕ್ಕೆ ಮೀರಿದ್ದರೆ). 18 ವರ್ಷ ವಯೋಮಿತಿಯವರು ಮತದಾನ ಮಾಡುವ ಹಕ್ಕು ಪಡೆದಿದ್ದಾರೆ. ಉಮೇದುವಾರರಿಗೆ 21 ವಯಸ್ಸಾಗಿರಬೇಕು. ಚುನಾವಣೆಯ ನಂತರ ಮಂಡಲಿ ಪಂಚಾಯತಿಗೆ ಒಬ್ಬರನ್ನು ಪ್ರಧಾನರೆಂದೂ, ಮತ್ತೊಬ್ಬರನ್ನು ಉಪ ಪ್ರಧಾನರೆಂದೂ ಆಯ್ಕೆ ಮಾಡುತ್ತಾರೆ. ಪ್ರಧಾನರಿಗೆ ಪ್ರತಿ ತಿಂಗಳು ರೂ. 300, ಉಪ ಪ್ರಧಾನರಿಗೆ ರೂ. 150 ಸಂಬಳ ಕೊಡಲಾಗುವುದು. ಸದಸ್ಯರು ಸಭೆಗಳಿಗೆ ಹಾಜರಾದಾಗ ದಿನಭತ್ಯ ರೂ. 15 ನೀಡಲಾಗುವುದು.

ಈ ಮಂಡಲ ಪಂಚಾಯತಿಗಳಿಗೆ ಈ ಹಿಂದೆ ಸರಕಾರ ಮಾಡುತ್ತಿದ್ದ ಕಾರ್ಯಗಳನ್ನು ವಹಿಸಿಕೊಡಲಾಗಿದೆ. ಗ್ರಾಮ ನೈರ್ಮಲ್ಯ, ಆರೋಗ್ಯ, ರಕ್ಷಣೆ, ಕಾಮಗಾರಿ ದೀಪ, ಉಗ್ರಾಣ, ಉದ್ಯಾನ, ಬೀಜಕೃಷಿ ಸಲಕರಣೆಗಳ ವಿತರಣೆಹೈನ ಅಭಿವೃದ್ಧಿ, ಕುಡಿಯುವ ನೀರು ಪೂರೈಕೆ, ಬುಡಕಟ್ಟು ಮತ್ತು ಹಿಂದುಳಿದವರ ಕಲ್ಯಾಣ ಮುಂತಾದ ಕಾರ್ಯಗಳ ನಿರ್ವಹಣೆಗಾಗಿ ಮಂಡಲಿ ಪಂಚಾಯತಿಯು ಮೂರು ಉಪ ಸಮಿತಿಗಳನ್ನು ಅಂದರೆ ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ ಮತ್ತು ಸಾರ್ವಜನಿಕ ಸೌಕರ್ಯ ಸಮಿತಿಗಳನ್ನು ನೇಮಿಸುವುದು. ತನ್ನ ಜವಾಬ್ದಾರಿಯನ್ನು ಪೂರೈಸುವ ಸಲುವಾಗಿ ಮಂಡಲಿ ಪಂಚಾಯತ್ ನಿಧಿಯೊಂದನ್ನು ಸ್ಥಾಪಿಸಲಾಗುವುದು. ಸಾರ್ವಜನಿಕ ಕೆಲಸ ಮತ್ತು ತಮ್ಮ ಸಿಬ್ಬಂದಿಗೆ ಈ ನಿಧಿಯಿಂದ ಖರ್ಚುಮಾಡಲಾಗುವುದು. ಸರಕಾರ ಮತ್ತು ಪರಿಷತ್ತುಗಳು ಕೊಡುವ ಹಣ, ತೆರಿಗೆ, ಆಸ್ತಿಪಾಸ್ತಿಯಿಂದ ಆದಾಯ, ಸಾಲ, ಸಿನೆಮಾ ಬಿಟ್ಟು ಮನರಂಜನಾ ತೆರಿಗೆ, ಮಾರುಕಟ್ಟೆ ಶುಲ್ಕ, ನೀರಿನ ಕರ, ಕಟ್ಟಡಗಳ ಮೇಲಿನ ತೆರಿಗೆ, ಜಾತ್ರೆ ಉತ್ಸವಗಳ ತಲೆಪಟ್ಟಿ ಇತ್ಯಾದಿಗಳೇ ಪಂಚಾಯತ್ ನಿಧಿಯ ಮೂಲ.

ಜಿಲ್ಲಾ ಪರಿಷತ್ತು 50 ಸಾವಿರ ಜನ ಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಹೊಂದಿರುತ್ತದೆ. ತಾಲ್ಲೂಕಿಗೆ ಒಬ್ಬರಂತೆ ಮಹಿಳೆಯರಿಗೂ, ಜನಸಂಖ್ಯೆ ಅನುಸಾರವಾಗಿ ಪರಿಶಿಷ್ಟ ಜಾತಿ, ಬುಡಕಟ್ಟು ಜನರಿಗೆ ಮೀಸಲಾತಿಯಿದೆ. ಪ್ರತಿ ಮಂಡಲ ಪಂಚಾಯತಿಯಿಂದಲೂ ಸರದಿಯ ಮೇಲೆ ವರ್ಷಕ್ಕೊಬ್ಬರಂತೆ ಜಿಲ್ಲಾ ಪರಿಷತ್ತಿನ ಸದಸ್ಯರಾಗುತ್ತಾರೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಕೈಗಾರಿಕಾ ಬ್ಯಾಂಕುಗಳ ಪ್ರತಿಧಿಗಳೂ, ಸಂಸತ್ ಸದಸ್ಯರೂ, ವಿಧಾನಸಭೆ, ವಿಧಾನ ಪರಿಷತ್ತಿನ ಸದಸ್ಯರೂ ಜಿಲ್ಲಾ ಪರಿಷತ್ತಿನ ಸದಸ್ಯರಾಗುತ್ತಾರೆ. ಸಂಸತ್ ವಿಧಾನಸಭೆ, ವಿಧಾನ ಪರಿಷತ್ ಸದಸ್ಯರಿಗೆ ಮತ ನೀಡುವ ಹಕ್ಕಿರುವುದಿಲ್ಲ.

ಚುನಾಯಿತ ಸದಸ್ಯರು ಒಬ್ಬ ಅಧ್ಯಕ್ಷ, ಉಪಾಧ್ಯಕ್ಷನನ್ನೂ, ಸಾಮಾನ್ಯ ವ್ಯವಹಾರ ಲೋಕೋಪಯೋಗಿ, ಹಣಕಾಸು, ಯೋಜನೆ, ಸಾಮಾಜಿಕನ್ಯಾಯ ಹಾಗೂ ಶಿಕ್ಷಣ ಸಮಿತಿಗಳನ್ನು ಆರಿಸುತ್ತಾರೆ. ಅಧ್ಯಕ್ಷರಿಗೆ ರಾಜ್ಯ ಸಚಿವರ ವೇತನ, "ಎ"ದರ್ಜೆ ಅಧಿಕಾರಿಯ ಪ್ರವಾಸ ಭತ್ತೆ, ದಿನ ಭತ್ತೆ ಕೊಡಲಾಗುವುದು. ಅವರೇ ಕಾರ್ಯಾಂಗದ ಮುಖ್ಯಸ್ಥರು. ಜಿಲ್ಲಾಧಿಕಾರಿಯ ಸ್ಥಾನಮಾನ ಹೊಂದಿದ ಅಧಿಕಾರಿ ಪರಿಷತ್ತಿನ ಕಾರ್ಯದರ್ಶಿ. ಸಭೆಗೆ ಹಾಜರಾಗುವ ಸದಸ್ಯರಿಗೆ ರೂ 30 ದಿನ ಭತ್ತೆ.

ಇಷ್ಟು ವರ್ಷ ಸರ್ಕಾರದ ಬೇರೆ ಬೇರೆ ಖಾತೆಗಳು ಮಾಡುತ್ತಿದ್ದ ಎಲ್ಲ ಕೆಲಸಗಳೂ ಆಯಾ ಜಿಲ್ಲಾ ಪರಿಷತ್ತಿನ ಅಂಕಿತದೊಳಗೆ ಬರುತ್ತವೆ. ಜಿಲ್ಲೆಯ ಸಮಗ್ರ ಯೋಜನೆ ತಯಾರಿಸಿ ಅದನ್ನು ಕಾರ್ಯಗತ ಮಾಡುವ ಎಲ್ಲ ಜವಾಬ್ದಾರಿ ಜಿಲ್ಲಾ ಪರಿಷತ್ತಿನದಾಗಿರುತ್ತದೆ. ವ್ಯವಸಾಯ ಅಭಿವೃದ್ಧಿ, ನೀರಾವರಿ, ಅಂತರ್ಜಲ ಮೂಲಗಳನ್ನು ರೂಢಿಸುವಿಕೆ, ಗ್ರಾಮೀಣ ಕೈಗಾರಿಕೆ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ, ವಯಸ್ಕರ ಶಿಕ್ಷಣಗಳೆಲ್ಲ ಇದರ ಕಾರ್ಯವ್ಯಾಪ್ತಿಯೊಳಗೆ ಬರುತ್ತದೆ.

ಕಾರ್ಯಗಳ ಅನುಷ್ಠಾನಕ್ಕಾಗಿ "ಜಿಲ್ಲಾ ಪರಿಷತ್ತು ನಿಧಿ" ಸ್ಥಾಪಿಸಲಾಗುವುದು. ಸರ್ಕಾರದ ಹಣ, ಸಹಾಯ ಧನ, ವಂತಿಗೆ, ಸಾಲ, ಜುಲ್ಮಾನೆಗಳಿಂದ ವಸೂಲಾದ ಹಣ, ಆಸ್ತಿಪಾಸ್ತಿಗಳಿಂದ ಬರುವ ಆದಾಯ, ಭೂ ಆಸ್ತಿಗಳಿಂದ ಬರುವ ಆದಾಯಗಳೇ ಇದರ ಮೂಲ.

ಹೊಸ ವಿಧೇಯಕದಲ್ಲಿ ಗ್ರಾಮ ಪಂಚಾಯತಿಗೆ ಸ್ಥಾನವಿಲ್ಲ. ಅದರ ಬದಲಾಗಿ ಗ್ರಾಮ ಸಭೆ ಎಂಬುದಿದೆ. ಆದರೆ ಇದಕ್ಕೆ ಯಾವ ಅಧಿಕಾರವೂ ಇಲ್ಲ. ಪ್ರತಿಯೊಂದು ಕಂದಾಯ ಗ್ರಾಮಕ್ಕಿರುವ ಇಂಥ ಗ್ರಾಮ ಸಭೆಗಳಿಗೆ ಆ ಊರಲ್ಲಿರುವ ಎಲ್ಲ ಮತದಾರರೂ ಸದಸ್ಯರೇ. ಅವರು ವರ್ಷಕ್ಕೆ ಎರಡು ಬಾರಿಯಾದರೂ ಸಭೆ ಸೇರಿ, ಮಂಡಲ ಪಂಚಾಯತಿಯ ಕೆಲಸಗಳ ಕುರಿತು ಚರ್ಚಿಸಿ, ತಮ್ಮ ಸಲಹೆ ಕೊಡಬೇಕು. ಇದರಲ್ಲಿ ಮಂಡಲ ಪಂಚಾಯತಿಯ ಪ್ರಧಾನರೇ ಅಧ್ಯಕ್ಷತೆ ವಹಿಸುತ್ತಾರೆ.

ನ್ಯಾಯ ಪಂಚಾಯಿತಿ :

ಈ ವಿಧೇಯಕದಲ್ಲಿ ಮತ್ತೊಂದು ಅಂಶ ಸೇರಿಕೊಂಡಿದೆ. ಸಣ್ಣ ಪುಟ್ಟ ಮೊಕದ್ದಮೆಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸುವ ಉದ್ದೇಶದಿಂದ ಪ್ರತಿಯೊಂದು ಮಂಡಲ ಪಂಚಾಯತಿ ಪದ್ಧತಿಯೊಳಗೆ ನ್ಯಾಯ ಪಂಚಾಯತಿ ಸ್ಥಾಪಿಸಲಾಗುವುದು. ಇದರಲ್ಲಿ ಒಬ್ಬ ಮಹಿಳೆ, ಒಬ್ಬರು ಹರಿಜನ, ಇನ್ನೊಬ್ಬರು ಹಿಂದುಳಿದ ವರ್ಗದವರು, ಇನ್ನಿಬ್ಬರು ಇತರ ಜಾತಿಯವರು ಹೀಗೆ 5 ಸದಸ್ಯರಿರುವರು. ಮಂಡಳ ಪಂಚಾಯತಿಯಿಂದ ಇವರನ್ನು ಆಯ್ಕೆ ಮಾಡಲಾಗುವುದು. ಕನಿಷ್ಟ 30 ವಯಸ್ಸಾದವರನ್ನೂ, ಸಾಕ್ಷರತೆ ಪಡೆದವರನ್ನಷ್ಟೇ ನ್ಯಾಯ ಪಂಚಾಯತಿಗೆ ಆರಿಸಲಾಗುವುದು.

ರೂ. 1,000 ಮೀರದ, ಕೆಲವೊಮ್ಮೆ ರೂ. 2,000ದ ವರೆಗಿನ ಸಿವಿಲ್ ಮೊಕದ್ದಮೆಗಳನ್ನು ಇವು ಇತ್ಯರ್ಥ ಮಾಡುತ್ತವೆ. ಹಾಗೆಯೇ ಸಣ್ಣ ಪುಟ್ಟ ಕ್ರಿಮಿನಲ್ ಮೊಕದ್ದಮೆಗಳನ್ನೂ ತೀರ್ಮಾನಿಸಬಹುದು. ಜೈಲು ಶಿಕ್ಷೆ ವಿಧಿಸುವ ಹಕ್ಕಿಲ್ಲ. ವಕೀಲರು ಇದರ ಮುಂದೆ ಹಾಜರಾಗುವಂತಿಲ್ಲ, ವಾದಿಸುವಂತಿಲ್ಲ. ಪಂಚಾಯ್ತಿ ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯಗಳಿಗೆ ಅಪೀಲು ಮಾಡಿಕೊಳ್ಳಬಹುದು.

ಕರಡು ಮಸೂದೆಯ ಪ್ರಕಾರ ಮಸೂದೆ ಜಾರಿಗೆ ಬಂದ 6 ತಿಂಗಳೊಳಗೆ ಸರ್ಕಾರ ಜಿಲ್ಲಾ ಪರಿಷತ್ತು ಮತ್ತು ಇತರ ಸ್ಥಳೀಯ ಸಂಸ್ಥೆಗಳ ಆದಾಯ ಮತ್ತು ಖರ್ಚು, ಸರಕಾರ ಹಾಗೂ ಇವುಗಳ ನಡುವೆ ಸಂಪನ್ಮೂಲಗಳ ವಿತರಣೆ ಸಂಬಂಧವಾಗಿ ಒಂದು ಹಣಕಾಸು ಆಯೋಗ ನೇಮಿಸಬೇಕಾಗುತ್ತದೆ. ಅಂಥ ಆಯೋಗಗಳನ್ನು ಪ್ರತಿ 5 ವರ್ಷಕ್ಕೊಮ್ಮೆ ನೇಮಿಸಬೇಕೆಂದು ಸೂಚಿಸಲಾಗಿದೆ. ಫಾದರ್ ಜೇಕಬ್‌ರ ಅಧ್ಯಕ್ಷತೆಯಲ್ಲಿ ಸರಕಾರ ಈಗಾಗಲೇ ಅಂಥ ಆಯೋಗ ಒಂದನ್ನು ನೇಮಿಸಿದೆ.

ಈ ಮಸೂದೆಯ ಪ್ರಕಾರ ಮಂಡಲ ಪಂಚಾಯತಗಳನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ಪರಿಷತ್ ಹೊಂದಿದೆ. ಜಿಲ್ಲಾ ಪರಿಷತ್‌ಗಳನ್ನು ರದ್ದುಪಡಿಸುವ ಅಧಿಕಾರವನ್ನು ಸರಕಾರ ಹೊಂದಿದೆ.

ಕೊನೆಯ ಮಾತು :

ಇಂಥ ಮಸೂದೆಗಳನ್ನು ಪಶ್ಚಿಮ ಬಂಗಾಲ, ಗುಜರಾತ್, ಮಹಾರಾಷ್ಟ್ರ, ಉತ್ತರ ಪ್ರದೇಶಗಳೇ ಜ್ಯಾರಿಯಲ್ಲಿ ತಂದಿವೆ. ಆಂಧ್ರ ಪ್ರದೇಶವೂ ಒಂದು ಶಾಸನ ತರಲಿದೆ.

ಪಶ್ಚಿಮ ಬಂಗಾಲದಲ್ಲಿ ಮೂರು ಹಂತಗಳ ಅಂದರೆ ಗ್ರಾಮ ಪಂಚಾಯತಿ, ಮಂಡಲ ಪಂಚಾಯತಿ, ಜಿಲ್ಲಾ ಪರಿಷತ್ತು — ಈ ರೀತಿಯ ಪಂಚಾಯತಿ ಮಸೂದೆಯಿದೆ. ಇತರ ರಾಜ್ಯಗಳಲ್ಲಿ ಕರ್ನಾಟಕದಂತೆ ಎರಡು ಹಂತಗಳಿವೆ.

ಕರ್ನಾಟಕದಂತಹ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬಲಿಷ್ಠ ರೈತ, ಕೃಷಿ ಕೂಲಿಗಾರರ ಸಂಘಗಳ ಅಭಾವವಿರುವಾಗ, ಪ್ರಜಾಪ್ರಭುತ್ವ ಚಳುವಳಿ ಇಲ್ಲದಿರುವಾಗ, ಭೂಮಾಲಿಕರ, ದೊಡ್ಡ ರೈತರ ಪ್ರಭಾವವೇ ಹೆಚ್ಚಾಗಿರುವಾಗ, ಅರೆ ಫ್ಯೂಡಲ್ ಪದ್ಧತಿ ನಷ್ಟವಾಗದಿರುವಾಗ, ಜಿಲ್ಲಾ ಪರಿಷತ್, ಮಂಡಲ ಪರಿಷತ್, ನ್ಯಾಯ ಪಂಚಾಯತಿಗಳಂತ ಹೊಸ ಸ್ವರೂಪದ ಸ್ಥಳೀಯ ಸಂಸ್ಥೆಗಳು ಯಾರ ಹಿಡಿತದೊಳಗೆ ಬಂದು ಯಾವ ರೀತಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಬಹುದೆಂಬುದನ್ನು ಅನುಭವದಿಂದ ಮುಂದೆ ತಿಳಿದುಕೊಳ್ಳಬೇಕು. ಪಶ್ಚಿಮ ಬಂಗಾಲದಲ್ಲಿದ್ದಂತೆ ಜನ ಜಾಗೃತಿಯಿದ್ದರೆ, ಜನರ ಹಿತ ರಕ್ಷಿಸುವ ಪಕ್ಷವಿದ್ದರೆ, ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಅನುಕೂಲವಾದ ಇಂಥ ಮಸೂದೆಗಳಿಂದ ನಿಜವಾಗಿಯೂ ಸಾರ್ವಜನಿಕರಿಗೆ ಸಹಾಯವಾಗುತ್ತದೆಂಬ ಸಂಗತಿಯನ್ನು ಈಗಾಗಲೇ ಕಂಡುಕೊಂಡಿದ್ದೇವೆ.

ನ್ಯಾಯ ಪಂಚಾಯತಿಗಳು ಗ್ರಾಮೀಣ ಪ್ರದೇಶದಲ್ಲಿಯ ಸಮಸ್ಯೆಗಳ ಪರಿಹಾರಕ್ಕೆ ಸಹಾಯವಾಗುತ್ತವೆಯೇ ಅಥವಾ ಅವುಗಳನ್ನು ಮತ್ತಷ್ಟು ವಿಕೋಪಕ್ಕೊಯ್ದು ಹಳ್ಳಿಗಾಡು ಪ್ರದೇಶಗಳಲ್ಲಿ ಜನಜೀವನ ಅಸ್ತವ್ಯಸ್ತಗೊಳ್ಳಲು ಕಾರಣೀಭೂತವಾಗುತ್ತದೆಯೇ ಹೇಗೆಂಬುದನ್ನು ಅನುಭವದಿಂದ ತಿಳಿಯಬೇಕಾಗಿದೆ.

ಈ ಮಸೂದೆಯ ಕುರಿತು ಓದುಗರ ಅಭಿಪ್ರಾಯಗಳಿದ್ದರೆ ಸ್ವಾಗತಿಸುತ್ತೇವೆ. ನಮ್ಮ ತಿದ್ದುಪಡಿಗಳನ್ನು ಶ್ರೀಮಂತಗೊಳಿಸಲು ಅವು ಸಹಾಯವಾಗಬಹುದು.

ಧಾರವಾಡ

SFI ನಿಂದ ಸೈಕಲ್ ಜಾಥಾ ಹಾಗೂ ನುತ ಪ್ರದರ್ಶನ

SFI ರಾಜ್ಯ ಸಮಿತಿಕರೆಯಮೇರೆಗೆ SFI ಧಾರವಾಡ ನಗರ ಘಟಕವು ದಿನಾಂಕ 1–8–83 ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಿತು.

ಬೇಡಿಕೆ ದಿನಾಚರಣೆಯ ಅಂಗವಾಗಿ 'ಸೈಕಲ್ ಜಾಥಾ' ಕಾರ್ಯಕ್ರಮ ಏರ್ಪಡಿಸಲಾಗಿತ್ತು.

AIR ವೃತ್ತದಲ್ಲಿ ಕಾ। ಪ್ರಕಾಶ್ ಉಡಿಕೇರಿಯವರು ಸೈಕಲ್ ಜಾಥಾವನ್ನು ಉದ್ಘಾಟಿಸುತ್ತ ಇದು ಡೊನೇಷನ್ ಹಾಗೂ ಕ್ಯಾಪಿಟೇಷನ್ ವಿರೋಧಿ ಚಳುವಳಿಯ ಮೊದಲ ಹಂತ, ಇಂದು ನಾವು ಪ್ರತಿಯೊಂದು ವಿದ್ಯಾಸಂಸ್ಥೆಗಳ ಎದುರಿನಲ್ಲಿ ಮತ ಪ್ರದರ್ಶನ ನಡೆಸುವುದಾಗಿ ಹೇಳಿದರು.

ಅಲ್ಲಿಂದ 'ಸೈಕಲ್ ಜಾಥಾ' ಪ್ರಾರಂಭವಾಗಿ ಧಾರವಾಡದ ಪ್ರಮುಖ ಶಿಕ್ಷಣ ಸಂಸ್ಥೆಯಾದ ಕರ್ನಾಟಕ ಕಾಲೇಜ್ ಎದುರಿನಲ್ಲಿ ಮತಪ್ರದರ್ಶನ ನಡೆಸಿದ SFI ಕಾರ್ಯಕರ್ತರು ಸೈಕಲ್ ಏರಿ (ಪತ್ರಿ) ಸೆಂಟ್ ಜೋಸೆಫ್ ಕಾನ್ವೆಂಟ್ ಸ್ಕೂಲಿನ ಎದುರಿನಲ್ಲಿ ಮತ ಪ್ರದರ್ಶನ ಮಾಡಿ ಘೋಷಣೆಗಳನ್ನು ಕೂಗಿದರು. ಅಲ್ಲಿಂದ ಅಂಜುಮನ್ ಹೈಸ್ಕೂಲ್ ಹಾಗೂ ಕಾಲೇಜ್‌ಗಳ ಎದುರಿನಲ್ಲಿ ಮತಪ್ರದರ್ಶನ ಮಾಡಿ ಸಭೆ ನಡೆಸಿದರು. ಸಭೆಯಲ್ಲಿ ಪ್ರಕಾಶ್ ಉಡಿಕೇರಿ ಮಾತನಾಡಿದರು. ಕಾ। ಸಾದಿಕ್ ಸೌದಾಗಾರ ಉರ್ದುವಿಗೆ ಅನುವಾದಿಸಿದರು.

ಶ್ರೀಲಂಕಾದ ಇಂದಿನ ಬಿಕ್ಕಟ್ಟು

ಶ್ರೀಲಂಕಾವು ತನ್ನ ಇತಿಹಾಸದಲ್ಲೇ ಅತ್ಯಂತ ಪದಗೆಟ್ಟ ಬಿಕ್ಕಟನ್ನು ಎದುರಿಸುತ್ತಿದೆ. ಸಾವಿರಾರು ಜನ ತಮಿಳರನ್ನು ನಿರಾಶ್ರಿತರನ್ನಾಗಿ ಮಾಡಲಾಗುತ್ತಿದೆ. ಅವರ ಮನೆಗಳನ್ನು ಸುಟ್ಟುಹಾಕಲಾಗುತ್ತಿದೆ. ಮತಾಂಧ ಸಿಂಹಳೀಯರು ನೂರಾರು ಜನ ತಮಿಳರನ್ನು ಕೊಲ್ಲುತ್ತಿದ್ದಾರೆ. ಕಾನೂನು ಮತ್ತು ಶಿಸ್ತನ್ನು ರಕ್ಷಿಸಬೇಕಾದವರೂ ಇದರಲ್ಲಿ ಸಹ ಭಾಗಿಗಳಾಗಿದ್ದಾರೆ. ಅತ್ಯಂತ ಭೀಕರ ಸಂಗತಿಯೆಂದರೆ ಸರ್ಕಾರಿ ಅಧಿಕಾರಿಗಳ ಮತ್ತು ಸಶಸ್ತ್ರ ಪಡೆಗಳ ಕೈವಾಡ ಇದರಲ್ಲಿ ಕಂಡುಬರುತ್ತಿರುವುದು.

ಇವೆಲ್ಲ ನಡೆಯುತ್ತಿರುವುದು ಅನಾದಿಕಾಲದಿಂದಲೂ ತಮಿಳು ಹೆಸರು 'ಈಝಂ' ಎಂದು ಕರೆಯಲ್ಪಡುವ ಉತ್ತರ ಮತ್ತು ಈಶಾನ್ಯ ಜಿಲ್ಲೆಗಳಾದ ಜಾಫ್ನಾ ಮತ್ತು ಟ್ರಿಂಕೊಮಲ್ಲೆಗಳಲ್ಲಿ. ಅಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ಭಾರತೀಯರಿರುವ ರಾಜಧಾನಿ ಕೊಲೊಂಬೊದಲ್ಲಿಯೂ ಇದು ನಡೆಯುತ್ತಿದೆ. ಈ ಅಮಾನುಷ ಕೃತ್ಯಗಳು ತಮಿಳು ಮೂಲದ 8 ಲಕ್ಷ ಪ್ಲಾಂಟೇಷನ್ ಕಾರ್ಮಿಕರಿರುವ ಕ್ಯಾಂಡಿ ಗುಡ್ಡಗಳಲ್ಲೂ ನಡೆಯುತ್ತಿವೆ. ನೂರಾರು ಕಾರ್ಮಿಕರನ್ನು ದಸ್ತಗಿರಿ ಮಾಡಲಾಗಿದೆ ಮತ್ತು ಅನೇಕರನ್ನು ಕೊಲಂಬೊ ಮತ್ತು ಕ್ಯಾಂಡಿ ಜೈಲುಗಳಲ್ಲಿ ಕೊಂದುಹಾಕಲಾಗಿದೆ. ಅಲ್ಲದೇ ತಮಿಳುನಾಡುವಿನಿಂದ ಬಂದಿರುವ ಪ್ರವಾಸಿಗರನ್ನು ಉಳಿಸುತ್ತಿಲ್ಲ.

ಕ್ಷೋಭೆಯ ಮೂಲ

ಇಂದಿನ ಹಿಂಸಾಕಾಂಡಕ್ಕೆ ಕಾರಣವಾಗಿರುವ ಕ್ಷೋಭೆಯ ಮೂಲವನ್ನು ಸರಿಯಾಗಿ ತಿಳಿಯಬೇಕಾಗಿದೆ.

ಚಾರಿತ್ರಿಕವಾಗಿ ಶ್ರೀಲಂಕೆಯು ಒಂದು ಸಂಯುಕ್ತ ರಾಜ್ಯವಾಗೇ ಉಳಿದುಬಂದಿದೆ. ಸಾವಿರಾರು ವರ್ಷಗಳಿಂದಲೂ ತಮಿಳರು ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಅವರ ಜನಸಂಖ್ಯೆ ಸುಮಾರು 20 ಲಕ್ಷದಷ್ಟಿದೆ.

ದ್ವೀಪದ ಎಲ್ಲ ಭಾಗಗಳಲ್ಲಿ ಮತ್ತು ವಿಶೇಷವಾಗಿ ಕೊಲೊಂಬೊ ಮತ್ತಿನ್ನಿತರ ನಗರಗಳಲ್ಲಿ ಸುಮಾರು ಎರಡು ಲಕ್ಷ ಭಾರತೀಯರು ವ್ಯಾಪಾರ ಮತ್ತು ಕೈಗಾರಿಕೋದ್ಯಮದಲ್ಲಿ ತೊಡಗಿದ್ದಾರೆ ಇವರಲ್ಲಿ ಬಹು ಸಂಖ್ಯಾತರು ತಮಿಳುನಾಡಿನವರು, ಕೇರಳದ ಹೆಂಡ ಇಳಿಸುವವರು ಗಮನಾರ್ಹ ಸಂಖ್ಯೆಯಲ್ಲಿದ್ದರು. ಆದರೆ ಸ್ವಾತಂತ್ರ್ಯನಂತರ ಕೆಲವರನ್ನು ಬಿಟ್ಟು ಉಳಿದವರು ಭಾರತಕ್ಕೆ ಹಿಂದಿರುಗಿದ್ದಾರೆ.

ಅಲ್ಲದೆ ಶ್ರೀಲಂಕಾದ ಮಧ್ಯಭಾಗದ ಕ್ಯಾಂಡಿ ಗುಡ್ಡಗಳಲ್ಲಿನ ಟೀ. ಪ್ಲಾಂಟೇಷನ್‌ಗಳಲ್ಲಿನ ಬಹುಸಂಖ್ಯಾತ ಕಾರ್ಮಿಕರು ಭಾರತೀಯ ಮೂಲದ ತಮಿಳರು. ಈ ಕಾರ್ಮಿಕರ ಪೂರ್ವಜರನ್ನು ಬ್ರಿಟಿಷ್ ಪ್ಲಾಂಟರುಗಳು ಕರೆದುಕೊಂಡು ಹೋಗಿದ್ದರು.

ಬ್ರಿಟಿಷರು ಟೀ ಪ್ಲಾಂಟೇಷನ್ ಪ್ರಾರಂಭಿಸಿದಾಗ ಅಲ್ಲಿ ಗುಡ್ಡಪ್ರದೇಶದಲ್ಲಿ ಕೃಷಿ ಮಾಡುತ್ತಿದ್ದ ಸಿಂಹಳೀಯ ರೈತಾಪಿ ಜನರನ್ನು ಹೊರಗಟ್ಟಲಾಯಿತು. ಇದರಿಂದಾಗಿ ವಲಸೆಬಂದ ತಮಿಳರ ಮತ್ತು ಸಿಂಹಳೀಯರ ನಡುವೆ ಘರ್ಷಣೆ ಪ್ರಾರಂಭವಾಯಿತು.

ಈ ಶತಮಾನದ ಆದಿ ಭಾಗದಲ್ಲಿ ಗುಲಾಮಿ ಕಾರ್ಮಿಕ ಪದ್ಧತಿಯನ್ನು ತೊಡೆದುಹಾಕಲಾಯಿತು. ಆದಾಗ್ಯೂ ಬಿಡುಗಡೆಗೊಂಡ ತಮಿಳು ಕಾರ್ಮಿಕರಿಗೆ ಪೌರಹಕ್ಕುಗಳು ದೊರೆಯಲಿಲ್ಲ.

ತಮಿಳರ ಸ್ಥಾನಮಾನ

ಎರಡನೇ ಮಹಾಯುದ್ಧದ ಕೊನೆಯ ವೇಳೆಗೆ, ಹಲವಾರು ತಲೆಮಾರುಗಳಿಂದ ಶ್ರೀಲಂಕಾದಲ್ಲಿ ನೆಲೆಸಿರುವ ತಮಿಳು ಕಾರ್ಮಿಕರ ಸ್ಥಾನಮಾನ ಕುರಿತಂತೆ ವಾದ ವಿವಾದಗಳಿದ್ದವು. ನಾನು ಭ್ರಾತೃ ಪ್ರತಿನಿಧಿಯಾಗಿ ಭಾಗವಹಿಸಿದ್ದ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ ಕಾಂಗ್ರೆಸ್‌ನಲ್ಲಿ ಈ ಪ್ರಶ್ನೆಯನ್ನು ಅಮೂಲಾಗ್ರವಾಗಿ ಚರ್ಚಿಸಿ ತಮಿಳರಿಗೆ ಪೂರ್ಣ ಪೌರತ್ವದ ಹಕ್ಕುಗಳನ್ನು ನೀಡಬೇಕೆಂದು ತೀರ್ಮಾನಿಸಲಾಯಿತು.

ಸ್ವಾತಂತ್ರ್ಯನಂತರ ಬಂಡವಾಳ-ಭೂಮಾಲೀಕರ ಕೈಗೆ ಅಧಿಕಾರ ಹಸ್ತಾಂತರಗೊಂಡು ಈ ಪ್ರಶ್ನೆ ಬಗೆಹರಿಯದೆ ಉಳಿದು ತಮಿಳರು ರಾಜ್ಯಹೀನರಾಗಿಯೇ ಉಳಿದಿದ್ದಾರೆ.

ಅರವತ್ತರ ದಶಕದಲ್ಲಿ ಎರಡೂ ದೇಶಗಳ ಪ್ರಧಾನ ಮಂತ್ರಿಗಳ ನಡುವೆ ಸಿರಿಮಾವೊ-ಶಾಸ್ತ್ರಿ ಒಪ್ಪಂದ-ಒಪ್ಪಂದ ವೇರ್ಪಟ್ಟಿತು. ಅದರಂತೆ ಬಹುಸಂಖ್ಯಾತ ಕಾರ್ಮಿಕರಿಗೆ ಪೂರ್ಣ ಪೌರತ್ವವನ್ನು ಮತ್ತು ಉಳಿದವರು ಭಾರತಕ್ಕೆ ಮರಳಿಬರುವಂತೆ ಒಪ್ಪಂದವಾಯಿತು. ಈ ಒಪ್ಪಂದವನ್ನು ಹತ್ತು ವರ್ಷಗಳಲ್ಲಿ ಅನುಷ್ಠಾನಕ್ಕೆ ತರಬೇಕಾಗಿತ್ತು.

ದುರದೃಷ್ಟವಶಾತ್ ಈ ಒಪ್ಪಂದ ಪೂರ್ಣ ಜಾರಿಗೊಳ್ಳಲಿಲ್ಲ. ಇದರಿಂದಾಗಿ ಇಂದಿಗೂ ಲಕ್ಷಾಂತರ ಭಾರತೀಯ ಮೂಲದ ಪ್ಲಾಂಟೇಷನ್ ಕಾರ್ಮಿಕರು ರಾಜ್ಯರಹಿತರಾಗೇ ಉಳಿದಿದ್ದಾರೆ. ಅವರೂ ಭಾರತಕ್ಕೆ ಬರುವಂತಿಲ್ಲ; ನಿರುದ್ಯೋಗ ಅತಿಯಾಗಿದ್ದು ಉದ್ಯೋಗವೂ ದೊರಕುತ್ತಿಲ್ಲ. ಶ್ರೀಲಂಕಾ ಪ್ಲಾಂಟರುಗಳಿಂದ ಶೋಷಣೆಗೆ ಒಳಗಾಗುತ್ತಿರುವುದಲ್ಲದೆ ಸಿಂಹಳೀಯರ ದ್ವೇಷಕ್ಕೂ ಈಡಾಗಿದ್ದಾರೆ.

ಪಶ್ಚಿಮ ಸಾಮ್ರಾಜ್ಯಶಾಹಿಗಳ ನೆರವನ್ನು ಅವಲಂಬಿಸಿರುವ ಲಂಕೆಯ ಬಂಡವಾಳ-ಭೂಮಾಲೀಕ ಆಡಳಿತ ಬಂಡವಾಳಶಾಹಿ ಅಧಿಕಾರ ಬೆಳವಣಿಗೆಯ ದಾರಿಯನ್ನು ಹಿಡಿದಿದೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಹೊಸದಾಗಿ ಸ್ವತಂತ್ರಗೊಂಡ ದೇಶಗಳಲ್ಲಿ ಸಾಮ್ರಾಜ್ಯಶಾಹಿ ತನ್ನ ಕೈವಾಡ ನಡೆಸುತ್ತಿದೆ. ಹಾಗಾಗಿ ಲಂಕೆಯು ತೀವ್ರ ಒತ್ತಡಗಳಿಗೆ ಬಲಿಯಾಗಿದ್ದು ಅನಾನುಕೂಲಕ ಷರತ್ತುಗಳೊಂದಿಗೆ ಸಾಲ ಪಡೆದಿದೆ. ಇದು ಆರ್ಥಿಕ ಸಾಮಾಜಿಕ ಬಿಕ್ಕಟ್ಟಿಗೆ ಎಡೆಮಾಡಿದೆ.

ಇಂತಹ ಪರಿಸ್ಥಿತಿಯಿಂದಾಗಿ ವಿವಿಧ ಧರ್ಮ ಮತಗಳ ಜನರ ನಡುವೆ ವೈಷಮ್ಯ ಬಿತ್ತಲು ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗಿದೆ. ನಮ್ಮ ದೇಶದಲ್ಲೂ ಇಂತಹ ಪರಿಸ್ಥಿತಿಯನ್ನು ಕಾಣಬಹುದು. ಆರ್ಥಿಕವಾಗಿ ಬಲಿಷ್ಠವಾದ ಭಾರತವನ್ನು ಸಹಿಸದ ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳು ದೇಶವನ್ನು ಚೂರುಚೂರು ಮಾಡಲು ಯತ್ನಿಸುತ್ತಿವೆ. ಅದರ ಕರಾಳ ಹಸ್ತವನ್ನು ಅಸ್ಸಾಂ, ಪಂಜಾಬ್ ಕಾಶ್ಮೀರಗಳಲ್ಲಿ ಕಾಣಬಹುದು. ಅನೇಕ ವರ್ಷಗಳಿಂದ ಇದರ ಬಗ್ಗೆ ನಾವು ಗಮನ ಸೆಳೆಯುತ್ತಿದ್ದು ಈಗ ಸರ್ಕಾರಿ ವಕ್ತಾರರೆ ಇದನ್ನು ಒಪ್ಪುತ್ತಿದ್ದಾರೆ. ಆದರೆ ಆ ಶಕ್ತಿಗಳನ್ನು ಹೆಸರಿಸುವಷ್ಟು ಧೈರ್ಯತೋರುತ್ತಿಲ್ಲ. 'ಭಿಕ್ಷುಕರಿಗೆ ಆಯ್ಕೆಯ ಸ್ವಾತಂತ್ರವಿಲ್ಲವಲ್ಲ!

ಗಮನ ಸೆಳೆಯುವಿಕೆ

65 ಕೋಟಿ ಜನಸಂಖ್ಯೆಯಿರುವ ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೈಗಾರಿಕೆಯಲ್ಲಿ ಹೆಚ್ಚು ಅಭಿವೃದ್ಧಿಗೊಂಡ ದೇಶವೇ ಸಾಮ್ರಾಜ್ಯಶಾಹಿ, ಬಹುರಾಷ್ಟ್ರೀಯ ಸಂಸ್ಥೆಗಳ ಆರ್ಥಿಕ ರಾಜಕೀಯ ಒತ್ತಡಗಳಿಗೆ ಬಲಿಯಾಗಿರಬೇಕಾದರೆ ಶ್ರೀಲಂಕಾದಂತ ಸಣ್ಣ ದೇಶದ ಸ್ಥಿತಿಯನ್ನು ಯಾರೂ ಊಹಿಸಬಹುದು.

ಶ್ರೀಸಾಮಾನ್ಯನ ಸಮಸ್ಯೆಗಳಾದ ಹಣದುಬ್ಬರ ನಿರುದ್ಯೋಗ ಮುಂತಾದವುಗಳನ್ನು ಪರಿಹರಿಸಲಾಗದ ಎಲ್ಲಾ ಬಂಡವಾಳ-ಭೂಮಾಲೀಕ ಸರ್ಕಾರಗಳು ಜನತೆಯ ಗಮನವನ್ನು ಭ್ರಾತೃಹತ್ಯೆಗಳ ಕಡೆ ಸೆಳೆಯಲು ಯತ್ನಿಸುತ್ತವೆ. ಲಂಕಾದಲ್ಲೂ ಆಗಿರುವುದು ಅದೇ. ಬಹುಸಂಖ್ಯಾತ ಸಿಂಹಳೀಯರನ್ನು ತಮಿಳು ಅಲ್ಪಸಂಖ್ಯಾಕರ ಮೇಲೆ ಎತ್ತಿಕಟ್ಟಲಾಗಿದೆ. ಉತ್ತರ ಲಂಕಾದ ತಮಿಳರು, ರಾಜ್ಯರಹಿತ ಪ್ಲಾಂಟೇಷನ್ ಕಾರ್ಮಿಕರು ಕೊಲಂಬೋ ಕ್ಯಾಂಡಿ, ಕದಿರ್‌ಗಾಮ, ಜಾಫ್ನಾ, ಟ್ರಿನ್‌ಕೊಮಲ್ಲೆ, ಅನುರಾಧಪುರಗಳಲ್ಲಿ ವ್ಯಾಪಾರ ಮತ್ತು ಸಣ್ಣ ಉದ್ಯಮಗಳಲ್ಲಿ ತೊಡಗಿರುವ ತಮಿಳರನ್ನು ಹೊರಗಟ್ಟಿದರೆ ಸಿಂಹಳೀಯರಿಗೆ ಉದ್ಯೋಗ ದೊರಕುತ್ತದೆಂಬ ವಿಚಾರವನ್ನು ಹೇಳಲಾಗುತ್ತಿದೆ.

ಶ್ರೀಲಂಕಾದ ಕೃಷಿ ಮಂತ್ರಿಯು ಆಕಾಶವಾಣಿಯಲ್ಲಿ ಮಾಡಿದ ಭಾಷಣದಿಂದ ಈ ಅಂಶ ವ್ಯಕ್ತವಾಗುತ್ತದೆ. ಲಂಕೆಯ ಎಡಪಕ್ಷಗಳು ತಮಿಳು ಉಗ್ರಗಾಮಿಗಳೊಂದಿಗೆ ಸರ್ಕಾರ ಉರುಳಿಸುವಲ್ಲಿ ಸಹಕರಿಸುತ್ತಿದೆಯೆಂದು ಜಯವರ್ಧನೆ ಮಾಡಿರುವ ಭಾಷಣದಿಂದ ಅವರ ಆಲೋಚನೆ ತಿಳಿಯಬಹುದಾಗಿದೆ.

ಸೋವಿಯತ್ ವಿರೋಧಿ-ಅಮೆರಿಕನ್ ಪರ ನಿಲುವು

ರಷ್ಯಾವನ್ನು ಎಲ್ಲೆಡೆ ಬಹಿಷ್ಕರಿಸುವ ಮತ್ತು ಸಮತಾವಾದವನ್ನು ಪೃಥ್ವಿಯಿಂದಲೇ ಅಳಿಸಿಹಾಕುವ ಅಮೆರಿಕನ್ ಜಾಗತಿಕ ಪಿತೂರಿಗೆ ಈ ಪರಿಸ್ಥಿತಿ ಅನುಕೂಲಕರವಾಗಿದೆ. ಈ ನೀತಿಗನುಗುಣವಾಗಿ ಹಿಂದೂ ಮಹಾಸಾಗರದ ಸಣ್ಣ ದೇಶಗಳನ್ನು ರೀಗನ್ ಆಡಳಿತ ಸುತ್ತುವರಿಯುತ್ತಿದೆ. ಡಿಗೋಗಾರ್ಸಿಯಾದಲ್ಲಿ ಅಣುಶಕ್ತಿ ನೆಲೆಗಳನ್ನು ಹೊಂದಿದ್ದು ಭಾರತಕ್ಕೂ ಬೆದರಿಕೆ ಒಡ್ಡುತ್ತಿದೆ. ಪಶ್ಚಿಮ ಏಷ್ಯಾ ಮತ್ತು ಆಗ್ನೇಯ ಏಷ್ಯಾದಲ್ಲಿ ಬಿಕ್ಕಟ್ಟನ್ನುಂಟುಮಾಡಲು ಯತ್ನಿಸುತ್ತಿದೆ.

ಸೋವಿಯತ್ ವಿರೋಧಿ, ಕಮ್ಯೂನಿಸಂವಿರೋಧಿ ಪೂರ್ವಗ್ರಹಗಳು ಮತ್ತು ಅಮೆರಿಕನ್ ಪರವಾದ ಜಯವರ್ಧನೆಯವರ ನಿಲುವು ನಿಚ್ಚಳವಾಗಿದೆ. ಜುಲೈ 31 ರಂದು ಆಕಾಶವಾಣಿಯಲ್ಲಿ ಮಾಡಿದ ಭಾಷಣದೊಂದಿಗೆ ಎಡ ಪಕ್ಷಗಳನ್ನು ಬಹಿಷ್ಕರಿಸಿದ್ದಲ್ಲದೆ ಲಂಕೆಯ ಜನಾಂಗೀಯ ಹಿಂಸೆಯಲ್ಲಿ ಕಮ್ಯೂನಿಸ್ಟರು ಭಾಗವಹಿಸಿದ್ದಾರೆಂದು ಹೇಳಿದ್ದಾರೆ. ಸಾಗರೋತ್ತರ ತಮಿಳರು ತೀವ್ರಗಾಮಿಗಳಿಗೆ ಬೆಂಬಲಿಸುತ್ತಿದ್ದಾರೆಂದು ಪರೋಕ್ಷವಾಗಿ ಹೇಳಿದ್ದಾರೆ.

ಅವರ ನಂತರ ಭಾಷಣ ಮಾಡಿದ ವಾರ್ತಾಮಂತ್ರಿ ಗಲಭೆಗಳಲ್ಲಿ ಕಾಣದ ಕೈ ಕುರಿತು ಮಾತನಾಡಿದ್ದಾರೆ. ಕಾಣದ ಕೈಯನ್ನು ಹೆಸರಿಸದಿದ್ದರೂ ಅವರು ಸೋವಿಯತ್ ಯೂನಿಯನ್ ಮತ್ತು ವಿದೇಶಗಳಲ್ಲಿ ತಮಿಳು ಸಂಘಟನೆಗಳನ್ನು ಪರೋಕ್ಷವಾಗಿ ಸೂಚಿಸಿದ್ದಾರೆ.

ಸೋವಿಯತ್ ಯೂನಿಯನ್ನನ್ನು ದುರಭಿಮಾನದ ತಮಿಳು ಸಘಟನೆಗಳೊಡನೆ ತಳುಕುಹಾಕುವುದರ ಉದ್ದೇಶ ಸ್ಪಷ್ಟವಾಗಿದೆ.

ಪ್ರತ್ಯೇಕ ತಮಿಳು ರಾಜ್ಯ ಬೇಡಿಕೆಯಿಡುವವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆಂದು ಜಯವರ್ಧನೆಯವರು ಎಚ್ಚರಿಕೆ ನೀಡಿದ್ದಾರೆ. ಲಂಕೆಯನ್ನು ದಹಿಸುತ್ತಿರುವ ಹಿಂಸಾಕಾಂಡವನ್ನು ಅಲ್ಲಿನ ಸರ್ಕಾರವೇ ವ್ಯವಸ್ಥಿತ ರೀತಿಯಲ್ಲಿ ಯೋಜಿಸಿದೆಯೆಂಬುದು ಮೇಲಿನ ಅಂಶಗಳಿಂದ ಸ್ಪಷ್ಟವಾಗುತ್ತದೆ.

ತಮಿಳರ ಸಂಯುಕ್ತ ವಿಮೋಚನಾ ರಂಗ (ಟಿ. ಯು. ಎಲ್. ಎಫ್.) ದ ಉಗ್ರಗಾಮಿಗಳು ತಿಳಿದೋ ತಿಳಿಯದೆಯೋ ಸರ್ಕಾರದ ಕುತಂತ್ರಕ್ಕೆ ಬಲಿಯಾಗಿದ್ದಾರೆ.

ಲಂಕಾದ ಉತ್ತರ ಭಾಗವನ್ನೊಳಗೊಂಡಂತೆ ಪ್ರತ್ಯೇಕ ತಮಿಳು ರಾಜ್ಯದ ಬೇಡಿಕೆಯ ವಿರುದ್ಧ ಧ್ವನಿ ಎತ್ತುವುದು ಭಾರತೀಯರೆಲ್ಲರ ತುರ್ತಿನ ಕೆಲಸವಾಗಿದೆ. ಈ ಬೇಡಿಕೆಗೆ ಬೆಂಬಲ ನೀಡುವವರು ವಾಸ್ತವವಾಗಿ ಆ ದ್ವೀಪದ ತಮಿಳು ಜನರ ಹಿತಾಸಕ್ತಿಗಳಿಗೆ ಯಾವುದೇ ಸಹಾಯವನ್ನು ಮಾಡುತ್ತಿಲ್ಲ. ಬದಲಾಗಿ ತಮಿಳರನ್ನು ಅನವಶ್ಯಕವಾಗಿ ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ. ಈ ಬೇಡಿಕೆಯು ಅವಾಸ್ತವಿಕವಾದುದೇಕೆಂದರೆ; ಅನಾದಿಕಾಲದಿಂದಲು ಶ್ರೀಲಂಕೆಯು ರಾಜಕೀಯ ಹಾಗೂ ಭೌಗೋಳಿಕವಾಗಿ ಸಂಯುಕ್ತವಾದ ಹಾಗೂ ಸಮ್ಮಿಳಿತವಾದ ರಾಜ್ಯವಾಗಿದೆ. ಈ ಬೇಡಿಕೆಯು ಉಚಿತವಾದುದಲ್ಲವೇಕೆಂದರೆ; ಯಾವುದೇ ಸರ್ಕಾರ ತನ್ನ ದೇಶವನ್ನು ಛಿದ್ರಗೊಳಿಸಲು ಒಪ್ಪುವುದಿಲ್ಲ ಮತ್ತು ಅಂತಹ ಚಳುವಳಿಯನ್ನು ಅಮಾನುಷವಾಗಿ ಹತ್ತಿಕ್ಕಲು ಯತ್ನಿಸುತ್ತದೆ.

ಆದ್ದರಿಂದ ಭಾರತ ಸರ್ಕಾರ ಈ ನಿಟ್ಟಿನಲ್ಲಿ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಜಾಗರೂಕರಾಗಿರಬೇಕಲ್ಲದೆ ಯಾವುದೇ ಪ್ರತ್ಯೇಕತಾ ಚಳುವಳಿಗೆ ಬೆಂಬಲ ನೀಡುತ್ತಿದೆ ಎಂಬ ಭಾವನೆ ಬರದಂತೆ ನೋಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಶ್ರೀಲಂಕೆಯೊಡ್ಡಿರುವ ಜಾಲದೊಳಗೆ ಬೀಳುವ ಸಾಧ್ಯತೆಗಳಿವೆ.

ಅಮೆರಿಕದ ಸಹಕಾರದ ನಿರೀಕ್ಷೆ

ಶ್ರೀಲಂಕಾವು ಅಮೆರಿಕಾದಿಂದ ಮಿಲಿಟರಿ ನೆರವನ್ನು ಪಡೆಯಲು ನಿರೀಕ್ಷಿಸುತ್ತಿದೆ ಎಂಬ ಬಲವಾದ ವರದಿಗಳಿವೆ. ಸರ್ಕಾರದ ಸೋವಿಯತ್ ಯೂನಿಯತ್ ವಿರೋಧಿ ನಿಲುವು, ಹಿಂಸೆಗೆ ಸರ್ಕಾರದ ವರಿಷ್ಟರಿಂದಲೇ ಬರುತ್ತಿರುವ ಕುಮ್ಮಕ್ಕು ಮತ್ತು ಅಮೆರಿಕನ್ ಪರವಾದ ಧೋರಣೆಗಳ ಹಿನ್ನೆಲೆಯಲ್ಲಿ ಈ ವರದಿಗಳನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ.

ಅಂತಹ ಮನವಿ ಮಾಡಿಕೊಂಡಲ್ಲಿ ಅಮೆರಿಕವೇ ನೇರವಾಗಿ ಮಿಲಿಟರಿ ನೆರವನ್ನು ನೀಡುವುದಿಲ್ಲ. ಬದಲಾಗಿ ತನ್ನ ಮಿತ್ರ ದೇಶಗಳಾದ ಸೌದಿ ಅರೇಬಿಯಾ, ಪಾಕಿಸ್ತಾನ ಮತ್ತು ಬಂಗ್ಲಾದೇಶಗಳನ್ನು ಸೇನೆಯ ನೆರವು ನೀಡಲು ಕೇಳಬಹುದು ಮತ್ತು ಅತ್ಯಂತ ಆಧುನಿಕ ಮಾರಕಾಸ್ತ್ರಗಳನ್ನು ಈ ದೇಶಗಳಿಗೆ ರೀಗನ್ ಸರ್ಕಾರ ಸರಬರಾಜು ಮಾಡಬಹುದು. ಒಂದು ಸಾರಿ ಸೇನೆಯನ್ನು ತಿಳಿಸಿದರೆ ಸದ್ಯಕ್ಕೆ ವಾಪಸ್ಸು ಕರೆಸಿಕೊಳ್ಳುವ ವಿಚಾರವೇ ಇರುವುದಿಲ್ಲ.

ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಶತ್ರು ಸೇನೆಯು ಭಾರತದ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿರುವಾಗ ನಮ್ಮ ಭವಿಷ್ಯವೇನು. ಪರಿಣಾಮವಾಗಿ ಭಾರತವು ತನ್ನ ಮಿಲಿಟರಿ ವೆಚ್ಚವನ್ನು ಅಧಿಕಗೊಳಿಸಬೇಕಾಗಿ ಅದರ ಹೊರೆಯನ್ನು ಶ್ರೀಸಾಮಾನ್ಯ ಹೊರಬೇಕಾಗಿದೆ. ಎಲ್ಲ ಅಭಿವೃದ್ಧಿ ಕಾರ್ಯಗಳೂ ಸ್ಥಗಿತಗೊಳ್ಳುತ್ತವೆ.

ಅಮೆರಿಕೆಯ ಜಾಗತಿಕ ಪಿತೂರಿ

ಪಿ. ರಾಮಮೂರ್ತಿ

ಇದು ಅಮೆರಿಕೆಯ ಜಾಗತಿಕ ಪಿತೂರಿಯಾಗಿದೆ. ಶ್ರೀಲಂಕಾವು ಈ ನೀತಿಗೆ ಬಲಿಯಾದುದ್ದೇ ಅದಲ್ಲಿ ರಷ್ಯಾ ಮತ್ತಿನ್ನಿತರ ಸಮಾಜವಾದಿ ರಾಷ್ಟ್ರಗಳ ನಿರ್ಮೂಲನ ಮತ್ತು ವಿಶ್ವದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸುವ ಅಮೆರಿಕೆಯ ಕೈಯಲ್ಲಿ ದಾಳವಾಗುತ್ತಿರುವ ಇದು ಹಿಂದಿನ ವಸಾಹತು ದೇಶಗಳ ಮೇಲೆ ನವ-ವಸಾಹತು ಶಾಹಿ ಮತ್ತು ಪರೋಕ್ಷ ಸಾಮ್ರಾಜ್ಯ ಶಾಹಿಯನ್ನು ಹೇರುವ ಜಾಗತಿಕ ಪಿತೂರಿಯಾಗಿದೆ.

ಕಳೆದ ನಲ್ವತ್ತು ವರ್ಷಗಳ ಯುದ್ಧ ನಂತರದ ಚರಿತ್ರೆ ಈ ಸಮೀಕ್ಷೆಯನ್ನು ಸಮರ್ಥಿಸುತ್ತದೆ. ಹಿಂದಿನ ಎಲ್ಲ ವಸಾಹತು ದೇಶಗಳು ಸ್ವಾತಂತ್ರ್ಯವನ್ನು ಪಡೆಯದಂತೆ ಅಲ್ಲದೆ ಅಲ್ಲಿನ ಪ್ರಗತಿಗಾಮಿ ಶಕ್ತಿಗಳಿಗೆ ಶಸ್ತ್ರಾಗಳನ್ನು ಸರಬರಾಜು ಮಾಡುವುದರ ಮೂಲಕ ಅಮೆರಿಕವು ತಡೆಯನ್ನೊಡ್ಡುತ್ತಿದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ಅನುಸರಿಸುತ್ತಿರುವ ನೀತಿ, ಪ್ಯಾಲೆಸ್ಟೀನ್ ಹೋರಾಟ ಗಾರರನ್ನು ನಿರ್ಮೂಲಗೊಳಿಸಲು ಆಕ್ರಮಣಕಾರಿ ಇಸ್ರೇಲ್‌ಗೆ ನೀಡುತ್ತಿರುವ ಬೆಂಬಲ, ವಿಯೆಟ್ನಾಂನ ವಿಮೋಚನೆ ಮತ್ತು ಒಂದುಗೂಡುವಿಕೆಗೆ ತಡೆಯನ್ನೊಡ್ಡಲು ಸಕ್ರಿಯವಾಗಿ ಚಟುವಟಿಕೆ, ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕೆಯಲ್ಲಿನ ಅದರ ಒಟ್ಟಾರೆ ನೀತಿ, ಪ್ರಪಂಚದಾದ್ಯಂತ ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ನಡೆಸುತ್ತಿರುವ ನಿರಂತರ ಪ್ರಯತ್ನ, ಡಿಗೋಗಾರ್ಸಿಯಾದಲ್ಲಿ ನೆಲೆಹೂಡಿ ಹಿಂದೂ ಮಹಾಸಾಗರದ ಸಣ್ಣ ಪುಟ್ಟ ದೇಶಗಳಿಗೆ ಒಡ್ಡಿರುವ ಅಪಾಯ, ಶಸ್ತ್ರಾಸ್ತ್ರಗಳ ಪೈಪೋಟಿಗೆ ನಿರಂತರವಾಗಿ ಒಪ್ಪದಿರುವುದು ಮತ್ತು ಅಣು ಯುದ್ಧಕ್ಕೆ ತೀವ್ರ ಸಿದ್ಧತೆ ಮಾಡುತ್ತಿರುವುದು–ಇವೆಲ್ಲವೂ ಅಮೆರಿಕೆಯ ಜಾಗತಿಕ ಪಿತೂರಿಗೆ ನಿದರ್ಶನಗಳಾಗಿವೆ.

ಭಾರತವು ಸ್ವಾತಂತ್ರ್ಯಗೊಂಡನಂತರ ಭಾರೀ ಮತ್ತು ಮೂಲ ಕೈಗಾರಿಕೆಗಳನ್ನು–ಪೆಟ್ರೋಲಿಯಂ, ರಸಾಯನಿಕ, ಉಕ್ಕು, ಶಕ್ತಿ ಉತ್ಪಾದನಾ ಘಟಕಗಳು, ಭಾರೀ ಕೈಗಾರಿಕೆ–ಸ್ಥಾಪಿಸಲು ಅಮೆರಿಕವು ಸಹಾಯ ನೀಡಲು ನಿರಾಕರಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಸೋವಿಯತ್ ಮತ್ತಿನ್ನಿತರ ಸಮಾಜವಾದಿ ರಾಷ್ಟ್ರಗಳ ನೆರವಿನೊಂದಿಗೆ ಮಾತ್ರ ಈ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಯಿತು. ತದನಂತರವೇ ಅಮೆರಿಕ ಮತ್ತಿನ್ನಿತರ ಸಾಮ್ರಾಜ್ಯ ಶಾಹಿ ದೇಶಗಳು ಅವುಗಳ ಬಹು ರಾಷ್ಟ್ರೀಯ ಸಂಸ್ಥೆಗಳ ಮೂಲಕ ಪ್ರವೇಶಿಸಿದವು. ಅವುಗಳು ಪ್ರವೇಶಿಸಿದ್ದು ನಮ್ಮ ತಾಂತ್ರಿಕ ಬೆಳವಣಿಗೆಗಾಗಿಯಲ್ಲದೆ ತಮ್ಮ ಹಳೆಯದಾದ ತಂತ್ರಜ್ಞಾನವನ್ನು ಮಾರಲು ಎಂಬುದು ಈಗಾಗಲೇ ಮನವರಿಕೆಯಾಗಿದೆ. ಈ ದೇಶಗಳು ಅವುಗಳ ಬಹು ರಾಷ್ಟ್ರೀಯ ಸಂಸ್ಥೆಗಳು ನಮ್ಮ ಮತ್ತು ಇನ್ನಿತರ ಅಭಿವೃದ್ಧಿ ಶೀಲ ದೇಶಗಳಲ್ಲಿ ವಹಿಸುತ್ತಿರುವ ಪಾತ್ರದ ವಿವರಣೆ ಇಲ್ಲಿ ಅನಗತ್ಯ.

ಎಡಶಕ್ತಿಗಳ ಮೇಲೆ ಧಾಳಿ

ಇದು ಯಾರದೇ ಕಪೋಲ ಕಲ್ಪಿತ ವಿಷಯವಲ್ಲ. ದೇಶದ ಐಕ್ಯತೆಯನ್ನು ರಕ್ಷಿಸುವ ನೆಪದಲ್ಲಿ ಜಯವರ್ಧನೆಯವರು ಎಡ ಪಕ್ಷಗಳನ್ನು ಬಹಿಷ್ಕರಿಸಿದ್ದಾರೆ. ಮತ್ತು ಅದರ ನಾಯಕರುಗಳನ್ನು ಜೈಲಿಗೆ ಹಾಕಿದ್ದಾರೆ. ಅದರೆ ದೇಶದ ಐಕ್ಯತೆ ಮತ್ತು ಭದ್ರತೆಯ ಬಗ್ಗೆ ತೀವ್ರ ಕಾಳಜಿಯಿರುವ ಮತ್ತು ದೇಶದ ವಿವಿಧ ಸಮುದಾಯಗಳನ್ನು ತಮಿಳರು, ಸಿಂಹಲೀಯರು ಹಿಂದೂಗಳು, ಬೌದ್ಧರು, ಕ್ರಿಶ್ಚಿಯನ್ ಮತ್ತು ಮುಸಲ್ಮಾನರ–ಒಂದು ಗೂಡಿಸುವಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿವೆ. ತಮಿಳು ಅಲ್ಪ ಸಂಖ್ಯಾಕರ ಸಮಸ್ಯೆಯನ್ನು ಜಾಫ್ನಾ ಮತ್ತು ಟ್ರಿನ್ ಕೊಮಲ್ಲಿ ಜಿಲ್ಲೆಗಳನ್ನೊಳಗೊಂಡ ಉತ್ತರ ಮತ್ತು ಈಶಾನ್ಯ ಪ್ರದೇಶಗಳಿಗೆ ಸ್ವಾಯತ್ತತೆಯ ಸ್ಥಾನಮಾನ ನೀಡುವುದರ ಮೂಲಕ ಪರಿಹರಿಸಬಹುದೆಂದು ಈ ಪಕ್ಷಗಳು ವಾದಿಸುತ್ತಿವೆ. ಆ ಮೂಲಕ ತಮಿಳರ ಭಾಷೆ ಸಂಸ್ಕೃತಿಯನ್ನು ರಕ್ಷಿಸುವುದಲ್ಲದೆ ದೇಶದಲ್ಲಿ ಶಾಂತಿಯ ಸೌಹಾರ್ದತೆ ಮತ್ತು ಐಕ್ಯತೆಯನ್ನು ಸಾಧಿಸಬಹುದಾಗಿದೆ. ಇದಲ್ಲದೆ ಗಲಭೆಗೆ ಕೆಲವು ದಿನ ಮುಂಚೆ ಕೊಲಂಬೊ ಆಕಾಶವಾಣಿಯಿಂದ ಆಗುತ್ತಿದ್ದ ತಮಿಳು ಪ್ರಸಾರವನ್ನು ಸರ್ಕಾರ ನಿಲ್ಲಿಸಿತು.

ಕೊಲಂಬೊ ಹಾಗೂ ಲಂಡನ್ ವರದಿಗಳನ್ವಯ ಭಾರತವು ಶ್ರೀಲಂಕಾ ಮೇಲೆ ಆಕ್ರಮಣ ಮಾಡಬಹುದೆಂದು ಜಯವರ್ಧನೆಯವರು ತಮ್ಮ ಸಚಿವರುಗಳಿಗೆ ಎಚ್ಚರಿಸಿದ್ದರು ಮತ್ತು ಪರಿಸ್ಥಿತಿಯನ್ನು ಎದುರಿಸಲು ಅಮೆರಿಕ, ಬ್ರಿಟನ್, ಪಾಕೀಸ್ಥಾನ ಮತ್ತು ಬಂಗ್ಲಾದೇಶಗಳಿಂದ ಮಿಲಿಟರಿ ನೆರವು ಕೇಳಿದ್ದಾರೆ. ಬ್ರಿಟನ್ನಿನ ಸರ್ಕಾರಿ ವಕ್ತಾರರು ಇದನ್ನು ದೃಢಪಡಿಸಿದ್ದಾರೆ. ಈ ಬಗ್ಗೆ ಪಾಕೀಸ್ಥಾನ ಮತ್ತು ಬಂಗ್ಲಾದೇಶಗಳು ಒಲವು ತೋರಿಸಿದ್ದವು. ಸೇನೆಯನ್ನು ಕಳಿಸಲು ತನಗೆ ಸಾಧ್ಯವಿಲ್ಲವೆಂದು ಅಮೆರಿಕ ತಿಳಿಸಿತ್ತು. ಪರ್ಯಾಯವಾಗಿ ಬಂಗ್ಲಾ ಪಾಕೀಸ್ಥಾನ ಸೇನೆಗಳಿಗೆ ಮಿಲಿಟರಿ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿತ್ತು. ಭಾರತದಿಂದ ಆಕ್ರಮಣದ ನೆಪದಲ್ಲಿ ಇದನ್ನೆಲ್ಲಾ ಮಾಡಬಹುದಾಗಿದೆ.

ಅಧಿಕ ಸಂಖ್ಯೆಯಲ್ಲಿರುವ ಬ್ರಿಟಿಷ್ ಹೈಕಮಿಷನ್ ಮತ್ತು ಅಮೆರಿಕಾನ್ ಧೂತವಾಸದ ಸಿಬ್ಬಂದಿ ಬಗ್ಗೆ ಶ್ರೀಲಂಕಾದ ವಿರೋಧವಿಲ್ಲ. ಅವುಗಳಿಂದ ನೆರವು ನಿರೀಕ್ಷಿಸುತ್ತಿರುವಾಗ ಮತ್ತು ಅವುಗಳ ಸೇವೆಯನ್ನು ತನ್ನ ನೆಲದ ಮೇಲೆ ಸ್ವಾಗತಿಸಲು ಸಿದ್ಧವಿರುವಾಗ ಇದು ಹೇಗೆ ಸಾಧ್ಯ? ಬದಲಾಗಿ ಸೋವಿಯತ್ ಯೂನಿಯನ್ ಮತ್ತು ಜರ್ಮನ್ ಡೆಮಾಕ್ರಟಿಕ್ ರಿಪಬ್ಲಿಕ್‌ಗಳು ತಮ್ಮ ಸಿಬ್ಬಂದಿಯನ್ನು ಕಡಿತಗೊಳಿಸಲು ಕೇಳಬೇಕೆಂಬ ನಿರ್ಧಾರ ತೆಗೆದು ಕೊಳ್ಳಲಾಗಿದೆಯೆಂದು ವರದಿಯಾಗಿದೆ. ಇದಕ್ಕೆ ಪೂರ್ವಭಾವಿಯಾಗಿ 'ದಿ ಸನ್' ಎಂಬ ಪ್ರಮುಖ ದೈನಿಕವೊಂದು ತನ್ನ ಸಂಪಾದಕೀಯದಲ್ಲಿ ಹೀಗೆ ಬರೆದಿದೆ. "ಉಕ್ಕಿನ ಪರದೆಯ ಹಿಂದೆ ಇರುವ ಎಲ್ಲ ದೇಶಗಳ ರಾಯಭಾರಿ ಕಛೇರಿಗಳನ್ನು ಮುಚ್ಚಲು ಮತ್ತು ಅವುಗಳ ವಿರುದ್ಧ ಕಠಿನ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ತೀವ್ರ ಸಲಹೆ ನೀಡುತ್ತೇವೆ. ನಿರ್ದಿಷ್ಟವಾಗಿ ಸೋವಿಯತ್ ರಷ್ಯಾ ಮತ್ತು ಜಿ.ಡಿ.ಆರ್. ಗಳಿಗೆ ನಮ್ಮ ಉಲ್ಲೇಖ ಸಂಬಂಧಿಸಿದೆ."

ಗಂಡಾಂತರದಲ್ಲಿರುವುದೇನು

ಇಂತಹ ಪರಿಸ್ಥಿತಿಯಲ್ಲಿ ಕೇವಲ ತಮಿಳುನಾಡಿನ ಅಥವಾ ಶ್ರೀಲಂಕಾ ಮತ್ತು ಅದರ ಜನತೆಯ ಹಿತಾಸಕ್ತಿಗಳು ಸಂಕಷ್ಟದಲ್ಲಿಲ್ಲ. ಗಂಡಾಂತರಕ್ಕೆ ಒಳಗಾಗಿರುವ ಅಂಶಗಳೆಂದರೆ ಸಮಗ್ರ ಭಾರತದ ಮತ್ತು ಅದರ ಜನತೆಯ ಹಿತಾಸಕ್ತಿಗಳು.

ಭಾರತ ಮತ್ತು ಶ್ರೀಲಂಕಾಗಳೆರಡರ ಸ್ವಾತಂತ್ರ್ಯ, ಐಕ್ಯತೆಗಳನ್ನು ಕಾಪಾಡುವ ಮತ್ತು ಶ್ರೀಲಂಕಾದ ಅಲ್ಪ ಸಂಖ್ಯಾತ ತಮಿಳರ ಹಿತಾಸಕ್ತಿಗಳನ್ನು ಕಾಪಾಡುವ ಎಲ್ಲ ಸಾಧ್ಯತೆಗಳನ್ನು ಗಂಭೀರವಾಗಿ ಪರಿಗಣಿಸುತ್ತ ಈ ಅಪಾಯಕಾರಿ ಬೆಳವಣಿಗೆಗೆ ನಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಬೇಕಾಗಿದೆ.

ಸಿಂಹಳೀಯರ ವಿರುದ್ಧದ ಭಾವನೆಗಳನ್ನು ಬಡಿದೆಬ್ಬಿಸುವ ಪಕ್ಷ ಹಾಗೂ ಶಕ್ತಿಗಳು ಶ್ರೀಲಂಕಾದಲ್ಲಿ ಮತೀಯ ಹತ್ಯಾಕಾಂಡ ಯೋಜಿಸಿರುವವರ ಕುತಂತ್ರಕ್ಕೆ ಅನಾಯಾಸವಾಗಿ ಬಲಿಯಾಗುತ್ತಾರೆ. ತಮಿಳರ ಮತ್ತು ಭಾರತ ರಾಷ್ಟ್ರೀಯರ ಹಿತಾಸಕ್ತಿಗಳನ್ನು ಯಾವುದೇ ರೀತಿ ರಕ್ಷಿಸುವ ಬದಲು ಅವರ ಜೀವ ಮತ್ತು ಬದುಕನ್ನು ಮತ್ತಷ್ಟು ಅಪಾಯಕ್ಕೊಡ್ಡುತ್ತಾರೆ.

ಅಂತಿಮವಾಗಿ ಈ ಸಮಸ್ಯೆಗೆ ಪರಿಹಾರವನ್ನು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಮಾತ್ರ ಕಂಡುಹಿಡಿಯಬೇಕಾಗಿದೆ. ಇದಕ್ಕಾಗಿ ಶ್ರೀಲಂಕೆಯ ಇಂದಿನ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರದ ವಿರುದ್ಧ ಹೋರಾಡಲು ಎಲ್ಲ ಭಾಷೆಯ ಮತ್ತು ಮತೀಯರ ಸಾಮಾನ್ಯ ಜನತೆಯ ಐಕ್ಯತೆಯನ್ನು ಸಾಧಿಸಬೇಕಾಗಿದೆ. ನಮ್ಮ ಜನತೆ ಸಮಚಿತ್ತತೆಯನ್ನು ಕಾಯ್ದುಕೊಂಡು ಸಾಮ್ರಾಜ್ಯಶಾಹಿಗಳ ವಿರುದ್ಧದ ಈ ಗಂಭೀರ ಹೋರಾಟದಲ್ಲಿ ತೊಡಗಿರುವ ಜನತಾಂತ್ರಿಕ ಶಕ್ತಿಗಳಿಗೆ ಪೂರ್ಣ ಬೆಂಬಲ ನೀಡಬೇಕಾಗಿದೆ.

ಶ್ರೀಲಂಕಾವು ಈ ಅಪಾಯಕಾರಿ ಮಾರ್ಗವನ್ನು ತೊರೆಯುವಂತೆ ಒತ್ತಾಯ ತರುತ್ತಿರುವ ಜಗತ್ತಿನಾದ್ಯಂತದ ಶಕ್ತಿಗಳ ಜೊತೆ ನಾವುಗಳು ಧ್ವನಿಗೂಡಿಸಬೇಕಾಗಿದೆ. ಜನತೆಯ ಒಕ್ಕೊರಲಿನ ಧ್ವನಿಯು ಸಾಮ್ರಾಜ್ಯಶಾಹಿ ಹಾಗೂ ಅವರ ಕೈಗೊಂಬೆಗಳ ಜಾಗತಿಕ ಪಿತೂರಿ ಮತ್ತು ಷಡ್ಯಂತ್ರಗಳನ್ನು ನಿಸ್ಸಂಶಯವಾಗಿಯೂ ಸೋಲಿಸುತ್ತದೆ. ★

ಉಡುಪಿಯಲ್ಲಿ ಮಾರ್ಕ್ಸ್ ಶತಾಬ್ದಿ

"ಜ್ಞಾನಕ್ಕಾಗಿ ಜ್ಞಾನ" ಎಂಬ ವಾದ ಹುರುಳಿಲ್ಲದ್ದು. ಬರಿಯ ವಾದದ ಮೂಲಕ ಸಾಬೀತುಗೊಳ್ಳುವ ಯಾವ ತತ್ವವೂ ಸತ್ಯವಾದುದಲ್ಲ. ತತ್ವದ ಸತ್ಯಾಸತ್ಯತೆ ಸಾಬೀತಾಗುವುದು ದೈನಂದಿನ ಬದುಕಿನಲ್ಲಿ ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಾದಾಗ ಮಾತ್ರ. ಪ್ರತ್ಯಕ್ಷ ಪ್ರಮಾಣಗಳು ಎಲ್ಲ ಬಗೆಯ ಸುಳ್ಳು ನಂಬಿಕೆಗಳನ್ನೂ ಬಯಲು ಮಾಡುತ್ತವೆ. ಆದ್ದರಿಂದ, ಜನರ ಬದುಕಿಗೆ ಹೆಚ್ಚು ಹತ್ತಿರವಾದ ಮತ್ತು ಎಲ್ಲ ಜನರ ಬಗ್ಗೆ, ಜನರಿಗೆ ಸಂಬಂಧಿಸಿದ ಎಲ್ಲ ವಿಚಾರಗಳ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸುವ ಮಾರ್ಕ್ಸ್‌ವಾದ ಮಾತ್ರ ಗ್ರಾಹ್ಯವಾದದ್ದು.

ಭಾರತದಲ್ಲೂ ತತ್ವದ ಸತ್ಯಾಸತ್ಯತೆಯನ್ನು ಪ್ರತ್ಯಕ್ಷ ಪ್ರಮಾಣದ ಮೂಲಕ ಸಾಬೀತು ಪಡಿಸುವ ಸತ್ಸಂಪ್ರದಾಯವಿತ್ತು. ಇದಕ್ಕೆ ನ್ಯಾಯ ವೈಶೇಷಿಕರೇ ಸಾಕ್ಷಿ. ಆದರೆ ಕ್ರಮೇಣ ಆಳುವ ವರ್ಗಗಳು ಶೋಷಣೆಯನ್ನು ತಮ್ಮ ಗುರಿಯನ್ನಾಗಿಸಿ, ಧರ್ಮದ ಮೂಲಕ ಜ್ಞಾನದ ಮೇಲೆ ಮಿತಿ ಹೇರಿದರು. ಮತ್ತು ಜನರ ಬುದ್ಧಿಯ ಮೇಲೆ ಹಿಡಿತ ಸಾಧಿಸಿದರು. ಇದಕ್ಕೆ ವ್ಯತಿರಿಕ್ತವಾಗಿ, ಮಾರ್ಕ್ಸ್‌ವಾದವು ಮಾನವ ಜನಾಂಗ ದಾಟಿ ಬಂದ ವಿವಿಧ ಹಂತಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿದುದರಿಂದಲೇ ಅವಕ್ಕೆ ವೈಜ್ಞಾನಿಕವಾದ ಕಾರಣಗಳನ್ನು ಕೊಡಲು ಸಮರ್ಥವಾಯಿತು. ಮಾನವ ಕೋಟಿಯ ಭೌತಿಕ ಹಾಗೂ ಬೌದ್ಧಿಕ ದಾಸ್ಯ ವಿಮುಕ್ತಿಯೇ ಮಾರ್ಕ್ಸ್‌ವಾದದ ಅಂತಿಮ ಗುರಿ. ಅದಕ್ಕಾಗಿ ಅದು ವೈಜ್ಞಾನಿಕವಾದ ದಾರಿಯನ್ನು ಹಾಕಿಕೊಟ್ಟು, ಜನರು ಅದರಲ್ಲಿ ಮುನ್ನುಗ್ಗುವಂತೆ ಪ್ರೇರೇಪಿಸುತ್ತದೆ" ಎಂದು ಖ್ಯಾತ ವಿಮರ್ಶಕ, ಶಿಕ್ಷಣ ತಜ್ಞ ಹಾಗೂ ಬೆಂಗಳೂರಿನ ನ್ಯಾಶನಲ್ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿರುವ ಡಾ|| ಜಿ. ರಾಮಕೃಷ್ಣ ಅವರು ಹೇಳಿದರು.

ಅವರು ಉಡುಪಿಯ ಸಮಾಜ ವಿಜ್ಞಾನ ವೇದಿಕೆ ತಾರೀಕು 14-8-83 ರಂದು ಏರ್ಪಡಿಸಿದ್ದ ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ದಿ ಕಾರ್ಯಕ್ರಮದಲ್ಲಿ "ಮಾರ್ಕ್ಸ್‌ವಾದ–ಒಂದು ಚಿಂತನೆ" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುತ್ತಿದ್ದರು. ಭಾರತೀಯ ವೈದಿಕ ಸಾಹಿತ್ಯ ಸಿದ್ಧಾಂತಗಳಲ್ಲಿ ಡಾಕ್ಟರೇಟ್ ಪಡೆದಿರುವ ಶ್ರೀ ರಾಮಕೃಷ್ಣ ಅವರು ತಮ್ಮ ಭಾಷಣದ ಬಗ್ಗೆ ನಡೆದ ಚರ್ಚೆಗೆ ಉತ್ತರಿಸುತ್ತಾ, ಮಾರ್ಕ್ಸ್‌ವಾದವು ರಾಷ್ಟ್ರಪ್ರೇಮವನ್ನು ವಿರೋಧಿಸುತ್ತದೆ ಎಂಬ ಆರೋಪವನ್ನು ಸ್ಪಷ್ಟವಾಗಿ ನಿರಾಕರಿಸಿದರಲ್ಲದೆ, ಮಾರ್ಕ್ಸ್‌ವಾದಿ ರಾಜಕಾರಣಿಗಳು ಇತರ ರಾಜಕಾರಣಿಗಳಿಗಿಂತ ಹೇಗೆ ಭಿನ್ನರು ಎಂಬುದನ್ನು ಸೋದಾಹರಣವಾಗಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕರ್ನಾಟಕ ರಾಜ್ಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಶಾಸಕ ಕಾ. ಪಿ. ರಾಮಚಂದ್ರ ರಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಭಾರತೀಯ ಕರ್ಮ ಸಿದ್ಧಾಂತವನ್ನು ಪ್ರಸ್ತಾಪಿಸಿ ಜನರ ದುಡಿಮೆಯ ಫಲವನ್ನ ಉಣ್ಣಲು ಆಳುವ ವರ್ಗಗಳಿಗೆ ಈ ಸಿದ್ಧಾಂತ ಹೇಗೆ ಸಹಾಯಕವಾಗಿದೆಯೆಂದೂ, ಅದಕ್ಕೆ ವ್ಯತಿರಿಕ್ತವಾಗಿ ದುಡಿಮೆಯ ಫಲವನ್ನ ದುಡಿಯುವ ಜನರೇ ಉಣ್ಣಬೇಕೆನ್ನುವ ಮಾರ್ಕ್ಸ್‌ವಾದವು ಹೇಗೆ ಆಳುವ ವರ್ಗಗಳ ದಾಳಿಗೆ ಒಳಗಾಗಿದೆಯೆಂದೂ ಉದಾಹರಣೆಗಳ ಮೂಲಕ ವಿವರಿಸಿದರು.

ಸಮಾಜ ವಿಜ್ಞಾನ ವೇದಿಕೆ, ಉಡುಪಿ ಇದರ ಸಂಚಾಲಕ ಶ್ರೀ ಬೋಳುವಾರು ಮಹಮ್ಮದ್ ಕುಂಞ ಸ್ವಾಗತಿಸಿ, ಕೊನೆಗೆ ಕೃತಜ್ಞತೆ ಸಲ್ಲಿಸಿದರು.

ಹರ್ಬರ್ಟ್ ಇಂಡಿಯಾ ಕಾರ್ಮಿಕರ ೩ನೇ ವಾರ್ಷಿಕ ಸಮಾವೇಶ

ಆಲ್‌ಫ್ರೆಡ್ ಹರ್ಬರ್ಟ್ ಇಂಡಿಯಾ ಎಂಪ್ಲಾಯಿಸ್ ಯೂನಿಯನ್‌ನ (ಸಿ ಐ ಟಿ.ಯು.) ಮೂರನೆಯ ವಾರ್ಷಿಕ ಸಮಾವೇಶವು ದಿನಾಂಕ 18ನೆಯ ಆಗಸ್ಟ್ 1983 ರಂದು ಬೆಂಗಳೂರಿನ ಸೆಕ್ರೆಡ್‌ಹಾರ್ಟ್ ಚರ್ಚಿನ ಕಮ್ಯೂನಿಟಿ ಹಾಲಿನಲ್ಲಿ ನೆರವೇರಿತು. ಸಮಾವೇಶವು 1981, 1982 ಹಾಗೂ 1983ರ ಸಾಲಿನ ವಾರ್ಷಿಕ ಚಟುವಟಿಕೆ, ರಾಷ್ಟ್ರ ಹಾಗೂ ರಾಜ್ಯಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿತು. ಜೊತೆಗೆ ಸಂಘದ ಮುಂದಿನ ಎರಡು ವರ್ಷಗಳಿಗಾಗಿ ಚುನಾವಣೆಯನ್ನು ಸಹ ನಡೆಸಿತು, ಕಾಂ. ಎಸ್. ಸೂರ್ಯ

(7ನೇ ಪುಟ ನೋಡಿ)

ಬೆಂಗಳೂರು

ಎಸ್ಕಾರ್ಟ್ಸ್ ಕಾರ್ಖಾನೆಯಲ್ಲಿ ಕಾರ್ಮಿಕ ಸಂಘಟನೆಯನ್ನು ಮುರಿಯಲೆತ್ನಿಸಿದ ಆಡಳಿತ ವರ್ಗದ ಸೋಲು

ಬೆಂಗಳೂರು ನಗರದ ಹೊರವಲಯದಲ್ಲಿರುವ ಯಲಹಂಕದಲ್ಲಿ ಸ್ಥಾಪಿತವಾಗಿರುವ ಎಸ್ಕಾರ್ಟ್ಸ್ ಕಾರ್ಖಾನೆಯಲ್ಲಿ 2,500 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜರ್ಮನ್ ಸಹಕಾರದೊಂದಿಗೆ ಸ್ಥಾಪಿತವಾದ ಈ ಬಹುರಾಷ್ಟ್ರೀಯ ಉದ್ಯಮದಲ್ಲಿ ಪಿಸ್ಟನ್ ರಿಂಗುಗಳು ಮತ್ತು ಪಿನ್ನುಗಳ ತಯಾರಿಕೆಯೆ ಮುಖ್ಯ ಉದ್ಯೋಗ. ಪಂಜಾಬಿನ ಪಾಟಿಯಾಲ ಮತ್ತು ಹರಿಯಾಣದ ಫರಿದಾಬಾದ್‌ಗಳಲ್ಲಿಯೂ ಕೂಡ ಈ ಉದ್ಯಮದ ಕಾರ್ಖಾನೆಗಳಿವೆ ಈ ಉದ್ಯಮ ಸಂಸ್ಥೆಯ ಅಧ್ಯಕ್ಷ ಎಚ್. ಬಿ. ನಂದಾ.

ಇತ್ತೀಚೆಗೆ ಈ ಉದ್ಯಮ ಸಂಸ್ಥೆ ಪತ್ರಿಕೆಗಳಲ್ಲಿ ಬಹಳ ಸುದ್ದಿ ಮಾಡಿತ್ತು. ಸ್ವರಾಜ್ ಪೌಲ್ ಎಂಬ ಬ್ರಿಟನ್‌ನಲ್ಲಿ ನೆಲೆಸಿರುವ ಭಾರತಿಯ ಹತೋಟಿ ಪಡೆಯ ಬಯಸುವ ಅನೇಕ ಪ್ರಮುಖ ಉದ್ಯಮಗಳ ಪಟ್ಟಿಯಲ್ಲಿ ಈ ಸಂಸ್ಥೆಯೂ ಸೇರಿದೆ ಎಂಬುದು ಈ ಉದ್ಯಮ ಸಂಸ್ಥೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಈ ಸಂಸ್ಥೆಯ ವಾರ್ಷಿಕ ಉತ್ಪನ್ನ 250 ಕೋಟಿಎಂಬುದು ಕೂಡ ಗಮನಾರ್ಹ.

ಬಲಿಷ್ಠ ಕಾರ್ಮಿಕ ಸಂಘಟನೆಗೆ ವಿರೋಧ

ಈ ಉದ್ಯಮದ ಆಡಳಿತ ವರ್ಗ ಬಲಿಷ್ಠ ಕಾರ್ಮಿಕ ಸಂಘಟನೆಯನ್ನು ಕಟ್ಟುವುದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿದೆ. ಶಿಸ್ತು ಮತ್ತು ಉತ್ಪಾದನೆ ಇವರ ದಿನನಿತ್ಯದ ಮಂತ್ರ. 1982ನೇ ಇಸವಿಯಲ್ಲಿ ಈ ಕಾರ್ಖಾನೆಯ ಕಾರ್ಮಿಕ ಸಂಘಕ್ಕೆ ಐ. ಎನ್. ಟಿ. ಯು. ಸಿ. ನಾಯಕತ್ವ. ಈ ನಾಯಕತ್ವ ಮಂಡಿಸಿದ ಬೇಡಿಕೆಗಳು ಮಾತುಕತೆಯ ಮೂಲಕ ಬಗೆಹರಿಯದಿದ್ದಾಗ 4 ತಿಂಗಳುಗಳ ಕಾಲ ದೀರ್ಘ ಬೀಗಮುದ್ರೆ. ರಾಜ್ಯದಲ್ಲಿ 82ರಡಿಸಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆಗಳು ಘೋಷಣೆಯಾದ ತಕ್ಷಣವೇ ಕಾರ್ಮಿಕರ ಒಪ್ಪಿಗೆಯನ್ನು ಪಡೆಯದೆಯೇ 3 ವರ್ಷಗಳ ಕಾಲದ ಒಪ್ಪಂದಕ್ಕೆ ಈ ನಾಯಕತ್ವ ಸಹಿ ಹಾಕಿತು ವಿಧಾನ ಸಭಾ ಚುನಾವಣೆಗಳಿಗೆ ಕೇವಲ ಕೆಲವೇ ದಿನಗಳು ಉಳಿದಿದ್ದವು. ಆದುದರಿಂದ ಅವಸರಯಾತಕ್ಕೆಂಬುದು ಸರ್ವವೇದ್ಯ, ಈ ಒಪ್ಪಂದ ಕಾರ್ಮಿಕರ ಹಿತಕ್ಕೆ ವಿರೋಧವಾದದ್ದರಿಂದ ಕಾರ್ಮಿಕರಿಗೆ ಪೂರ್ತಿ ಅಸಮಾಧಾನ. ಇದರ ಫಲವಾಗಿ ಐ. ಎನ್. ಟಿ. ಯು ಸಿ. ನಾಯಕತ್ವ ಹೋಗಿ ಸಿ. ಐ. ಟಿ. ಯು ಬಂದಿತು.

ಈ ಹೊಸ ನಾಯಕತ್ವಕ್ಕೆ ಕಾ। ಸೂರ್ಯ ನಾರಾಯಣ ರಾವ್ ಸಲಹೆಗಾರರು ಈ ನೂತನ ಮುಖಂಡತ್ವದಲ್ಲಿ ನಡೆದ ಹೋರಾಟ ಮತ್ತು ಮಾತುಕತೆಗಳ ಫಲವಾಗಿ ಅನೇಕ ಸೌಲಭ್ಯಗಳು ದೊರೆತವು.

(1) ಅಮಾನತ್‌ನಲ್ಲಿ ಇಟ್ಟಿದ್ದ 8 ಜನರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಂಡಿದ್ದು.

(2) ಆಗಸ್ಟ್ 82 ರಲ್ಲಿ 'ಗೋ ಸ್ಲೋ' ಮಾಡಿದಾಗ ನಿರಾಕರಿಸಲ್ಪಟ್ಟ ಸಂಬಳ ಕೊಟ್ಟರು.

(3) ಜನವರಿ 5ರ ರಜದ ಸಂಬಳ ಕೊಡಲಾಯಿತು.

(4) ರಿಂಗ್ ಫ್ರೇಮ್ ವಿಭಾಗದಲ್ಲಿ ಇನ್‌ಸೆಂಟಿವ್ ವಿಮರ್ಶೆ ಮಾಡಿದ್ದರಿಂದ 700 ಜನ ಕಾರ್ಮಿಕರಿಗೆ ರೂ 50 ರಿಂದ 75ರ ವರೆಗೂ ಲಾಭ.

(5) ರಾತ್ರಿ ಪಾಳಿ ಕೆಲಸಗಾರರಿಗೆ ಒಂದು ಬಿಸ್ಕಟ್, 2 ಬನ್, ಒಂದು ಚಹ ಕೊಡಲೊಪ್ಪಿದರು.

(6) ಕ್ಯಾಂಟೀನಿನ ಉಪಹಾರದ ದೈನಂದಿನ ಪಟ್ಟಿಯಲ್ಲಿ ವೈವಿಧ್ಯತೆ.

ಕಾರ್ಮಿಕರ ಬೇಡಿಕೆಗಳ ಬಗ್ಗೆ ಕಾರ್ಮಿಕರನ್ನು ಒಟ್ಟುಗೂಡಿಸಲು ಹೊಸದಾಗಿ ಬಂದ ನಾಯಕತ್ವ ಪ್ರಯತ್ನಿಸಿತು. ಆದರೆ ಆಡಳಿತ ವರ್ಗದ ಯೋಜನೆ ಇದಕ್ಕೆ ತದ್ವಿರುದ್ಧ. ಸಂಘಟನೆಯನ್ನು ಒಡೆಯುವ ಯೋಚನೆ ಅವರದು. ಆಡಳಿತ ವರ್ಗ ಕ್ಯಾಜುಯಲ್ ಕೆಲಸಗಾರರಿಂದ ಕೆಲಸ ಮಾಡಿಸಲು ಮಾಡಿದ ಪ್ರಯತ್ನವನ್ನು ಪ್ರತಿಭಟಿಸಿದ್ದಕ್ಕೆ ಸಂಘದ ಕಾರ್ಯದರ್ಶಿಯನ್ನು ಕೆಲಸದಿಂದ ಅಮಾನತುಗೊಳಿಸಿದರು. ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು 1-8-83 ರಂದು ಕಾರ್ಮಿಕರಿಂದ ಬೈಠಕ್ ಮುಷ್ಕರ. ಮಾರನೆಯ ದಿನ ಉಪ ಕಾರ್ಮಿಕ ಕಮಿಷನರ್‌ರವರ ಮುಂದೆ ನಡೆದ ಮಾತುಕತೆಯಲ್ಲಿ ಆಡಳಿತ ವರ್ಗ ಕಾರ್ಯದರ್ಶಿಯ ಅಮಾನತ್ತನ್ನು ವಾಪಸ್ ಪಡೆಯಲು ನಿರಾಕರಿಸಿತು. ಇದರಿಂದ ಬೈಠಕ್ ಮುಷ್ಕರವು ಮುಂದುವರಿಯಿತು. ಬೈಠಕ್ ಮುಷ್ಕರ ಮುಂದುವರಿದದ್ದಕ್ಕೆ ಕುಪಿತರಾದ ಆಡಳಿದ ವರ್ಗದವರು 3-8-83 ರಂದು ಪದಾಧಿಕಾರಿಗಳು ಮತ್ತು ಇನ್ನು ಕೆಲವರನ್ನು (7 ಜನರನ್ನು) ಮತ್ತೆ ಅಮಾನತುಗೊಳಿಸಿದರು.

ಕಾರ್ಖಾನೆಯೊಳಗೆ ಬೈಠಕ್ ಮುಷ್ಕರ ನಡೆಸಿದರೆ ಮತ್ತಷ್ಟು ಜನರನ್ನು ಅಮಾನತಗೊಳಿಸಿ ಸಂಘಟನೆಯನ್ನು ಮುರಿಯಲು ಆಡಳಿತ ವರ್ಗ ಪ್ರಯತ್ನಿಸುತ್ತದೆ ಎಂದು ಕಾರ್ಮಿಕರು ಸಭೆ ಸೇರಿ ಕಾರ್ಖಾನೆಯ ಹೊರಗಿನಿಂದ ಮುಷ್ಕರ ನಡಸಲು ತೀರ್ಮಾನಿಸಿದರು. ಈ ಕಾರ್ಮಿಕರನ್ನು ಉಪವಾಸಕ್ಕೆ ತಳ್ಳಿ ಸಂಘಟನೆಯನ್ನು ಮುರಿಯಬೇಕೆಂದು ಆಡಳಿತ ವರ್ಗ ದುಡಿದ ಸಂಬಳವನ್ನು ಕೂಡ ಕೊಡಲು ನಿರಾಕರಿಸಿತು. ಮತ್ತು ಆಗಸ್ಟ್ 4 ರಂದು ಮತ್ತು 6ರಂದು ನಡೆದ ಮಾತುಕತೆಗಳಲ್ಲಿ ಕೂಡ ತನ್ನ ಹಟಮಾರಿತನವನ್ನು ಮುಂದುವರಿಸಿತು ಮತ್ತು ಅನೇಕ ಹೊಸ ಷರತುಗಳನ್ನು ಹಾಕಿತು. ಆದರೆ ಕಾರ್ಮಿಕರು ಧೃತಿಗೆಡದೆ ಮುಷ್ಕರ ಮುಂದುವರಿಸಿದರು, ಆದರೆ ಕಾರ್ಮಿಕರ ಐಕ್ಯತೆಯ ಮುಂದೆ ಮಣಿಯಲೇಬೇಕಾಯಿತು.

ಆಗಸ್ಟ್ 20 ಮತ್ತು 21 ರಂದು ಕಾರ್ಮಿಕ ಸಚಿವರ ಸಮ್ಮುಖದಲ್ಲಿ 3ಜನ ಸಂಘದ ಪದಾಧಿಕಾರಿಗಳು ಮತ್ತು ಇತರ ಇಬ್ಬರ ಅಮಾನತ್ ಅನ್ನು ವಾಪಸ್ ತೆಗೆದುಕೊಳ್ಳಲು ಒಪ್ಪಿದರು. ಇನ್ನುಳಿದವರು ಅಮಾನತ್‌ನಲ್ಲಿದ್ದೇ ವಿಚಾರಣೆಗೆ ಒಳಪಡಬೇಕೆಂದು ತೀರ್ಮಾನವಾಯಿತು. ಇದನ್ನು ಎಲ್ಲಾ ಸದಸ್ಯರ ಸಭೆಯ ಮುಂದೆ ಇಟ್ಟು ಸದ್ಯಕ್ಕೆ ಮುಷ್ಕರ ನಿಲ್ಲಿಸಿ ಕೆಲಸಕ್ಕೆ ವಾಪಸಾಗಬೇಕೆಂದು ತೀರ್ಮಾನಿಸಲಾಯಿತು.

ಕಾರ್ಮಿಕರ ಸಂಘಟನೆಯನ್ನು ಭಗ್ನಗೊಳಿಸುವ ಆಡಳಿತ ವರ್ಗದ ಯೋಜನೆ ಸಫಲವಾಗಲಿಲ್ಲ. ಆದರೆ ಹೋರಾಟ ಇನೂ ಮುಗಿದಿಲ್ಲ ಮುಂದೆ ಬರಬಹುದಾದ ದಮನಕಾರಿ ಕ್ರಮದ ವಿರುದ್ಧ ಹೋರಾಡಲು ಸಂಘ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಸಂಯುಕ್ತ ಹೋರಾಟದ ಫಲ - ದಿನಗೂಲಿ ಕೆಲಸಗಾರರ ವಿಜಯ

ಕರ್ನಾಟಕ ರಾಜ್ಯದ ಹಲವಾರು ಖಾತೆಗಳಲ್ಲಿ, ಪಿ. ಡಬ್ಲ್ಯು. ಡಿ. ನೀರಾವರಿ ಮೊದಲಾದವುಗಳಲ್ಲಿ - ಕಳೆದ ಹಲವಾರು ವರ್ಷಗಳಿಂದ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವ 36000ಕ್ಕೂ ಮೇಲ್ಪಟ್ಟ ಕೆಲಸಗಾರರು ತಮ್ಮ ಹೋರಾಟದ ಫಲವಾಗಿ ವಿಜಯಗಳಿಸಿದ್ದಾರೆ. ಪಿ. ಡಬ್ಲ್ಯು. ಡಿ. ಮತ್ತು ಎನ್. ಎಂ. ಆರ್. ಕಾರ್ಮಿಕರ ರಾಜ್ಯ ಮಟ್ಟದ ಒಕ್ಕೂಟ ಇದೇ ತಿಂಗಳು 16ರಿಂದ ತಮ್ಮ ಬೇಡಿಕೆಗಳಿಗಾಗಿ ಬೆಂಗಳೂರಿನಲ್ಲಿ ವಿಧಾನ ಸೌಧದ ಮುಂದೆ ಆಮರಣ ಉಪವಾಸ ಕೈಗೊಂಡಿದ್ದರು. ಸಿ ಐ ಟಿ ಯು ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರು ವಿಧಾನ ಸಭೆಯಲ್ಲಿ ಇವರ ಪ್ರಶ್ನೆಯನ್ನೆತ್ತಿ ಕಾರ್ಮಿಕರಿಗೆ ನ್ಯಾಯಸಿಗಬೇಕೆಂದು ಒತ್ತಾಯ ಮಾಡಿದಾಗ, ಹೊರಗೆ ಹಾಗೂ ಒಳಗಿನ ಹೋರಾಟದ ಫಲವಾಗಿ ಯಾವ ಕೆಲಸಗಾರರನನ್ನೂ ಕೆಲಸದಿಂದ ತೆಗೆದು ಹಾಕುವುದಿಲ್ಲೆಂದು, ಶೇಕಡ 80ಕ್ಕೂ ಮೇಲ್ಪಟ್ಟ ದಿನಗೂಲಿ ಕೆಲಸಗಾರರನ್ನು ಕಾಯಂ ಮಾಡುವುದಾಗಿಯೂ ಮಂತ್ರಿಯವರು ಆಶ್ವಾಸನೆ ನೀಡಿದ್ದಲ್ಲದೆ, ಉಪವಾಸವಿದ್ದ ಸ್ಥಳಕ್ಕೆ ಬಂದು ತಮ್ಮ ಆಶ್ವಾಸನೆಯನ್ನು ಪುನರುಚ್ಚರಿಸಿದರು.

ಸಂಯುಕ್ತ ಹೋರಾಟದ ಫಲವಾಗಿ ದಿನಗೂಲಿ ಕೆಲಸಗಾರರಿಗೆ ದೊರೆತಿರುವ ಅತಿ ದೊಡ್ಡ ವಿಜಯವಿದು. ಕಾರ್ಮಿಕರ ಸಂಘಟನೆಯನ್ನು ಭದ್ರ ಗೊಳಿಸಲು ಇದು ಸಹಾಯವಾಗಲಿ.

ಸಿ. ಪಿ. ಐ. (ಎಂ) ಎಂ. ಪಿ.ಗಳಿಂದ

ಸಿಯೋಲ್‌ನ ಸಂಸದೀಯ ಸಮ್ಮೇಳನಕ್ಕೆ ಬಹಿಷ್ಕಾರ

ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ನಲ್ಲಿ ನಡೆಯಲಿರುವ ಅಂತರ ಸಂಸದೀಯ ಸಂಘ (ಐ. ಪಿ. ಯು.)ದ ಎಪ್ಪತ್ತನೇ ಸಮ್ಮೇಳನದಲ್ಲಿ ಭಾಗವಹಿಸುವ ಭಾರತದ ಸಂಸದೀಯ ಪ್ರತಿನಿಧಿ ಮಂಡಳಿಯನ್ನು ಸೇರಬಾರದೆಂದು ಸಿ. ಪಿ. ಐ. (ಎಂ)ನ ಸಂಸದೀದೀಯ ಸಮಿತಿ ನಿರ್ಧರಿಸಿದೆ. ಈ ಬಗ್ಗೆ ಕಾ। ಸಮರ್ ಮುಖರ್ಜಿ ಹಾಗೂ ಕಾ। ಹರಕಿಶನ್‌ಸಿಂಗ್ ಸುರಜೀತ್ ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದ್ದಾರೆ.

"ದಕ್ಷಿಣ ಕೋರಿಯಾದ ಚೋನ್ ಡು ಹ್ವಾನ್‌ನ ಸರಕಾರ ಒಂದು ಫ್ಯಾಸಿಸ್ಟ್ ಸರ್ವಾಧಿಕಾರೀ ಆಡಳಿತ. ಅದು ಕೋರಿಯಾದ ಜನತೆಯ ರಕ್ತ ಹರಿಸಿ ಆಳ್ವಿಕೆ ನಡೆಸುತ್ತಿದೆ ಆತನ ಆಡಳಿತದಡಿಯಲ್ಲಿ ಎಲ್ಲಾ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ; ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ನಾಗರಿಕ ಸ್ವಾತಂತ್ರ್ಯಗಳ ನಿರ್ದಯ ದಮನ ನಡೆಯುತ್ತಿದೆ; ಭಯೋತ್ಪಾದಕತೆ ಅಧಿಕೃತ ಧೋರಣೆಯಾಗಿದೆ. ಐ. ಪಿ. ಯು ಸಮ್ಮೇಳನವನ್ನು ಸಿಯೋಲ್‌ನಲ್ಲಿ ನಡೆಸುವುದರಿಂದ ಈ ಸರ್ವಾಧಿಕಾರಿ ಆಡಳಿತಕ್ಕೆ ತನ್ನನ್ನು ಕಾನೂನುಬದ್ಧಗೊಳಿಸಿಕೊಳ್ಳಲು ಅವಕಾಶ ಒದಗಿಸಿದಂತಾಗುತ್ತದೆ ಹಾಗೂ ಅದು ಕೊರಿಯಾದ ಶಾಂತಿಯುತ ಪುನರೇಕೀಕರಣಕ್ಕೆ ತಣ್ಣೀರೆರಚುತ್ತದೆ.

ಚೋನ್ ಡು ಹ್ವಾನ್‌ನ ಸರ್ವಾಧಿಕಾರ ಅಣುಯುದ್ಧ ಹಾಗೂ ಜಾಗತಿಕ ಮೇಲಧಿಕಾರ ನಡೆಸುವ ಪ್ರಯತ್ನದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಒಂದು ಕೈಗೊಂಬೆ. ಕೋರಿಯಾದ ವಿಭಜನೆ 1950-52ರ ಯುದ್ಧದ ಕೊನೆಯಲ್ಲಿ ಆದ ಶಸ್ತ್ರವಿರಾಮ ಒಪ್ಪಂದದ ಪ್ರಕಾರ ಒಂದು ತಾತ್ಕಾಲಿಕ ಕ್ರಮ ಆದರೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಅವರು ಒಂದಾದ ಮೇಲೊಂದರಂತೆ ಸ್ಥಾಪಿಸಿದ ಕೈಗೊಂಬೆ ಆಡಳಿತಗಳು ಈ ವಿಭಜನೆಯನ್ನು ಮೂರು ದಶಕಗಳಿಗೂ ಮೀರಿ ಮುಂದುವರೆಸಿ ಅದನ್ನು ಶಾಶ್ವತಗೊಳಿಸಲು ಯತ್ನಿಸುತ್ತಿವೆ ದಕ್ಷಿಣ ಕೋರಿಯಾದಲ್ಲಿ ಅಮೇರಿಕನ್ ಸೇನೆಗಳು ನೆಲೆಗೊಂಡಿವೆ. ಮಿಲಿಟರಿ ನೆಲೆಗಳನ್ನು ಅಮೇರಿಕಾ ಇಲ್ಲಿ ಸ್ಥಾಪಿಸಿದೆ. ದಕ್ಷಿಣ ಭಾಗದಲ್ಲಿನ ಈ ಅಮೇರಿಕನ್ ಇರುವಿಕೆಯೇ ಕೋರಿಯಾದ ಶಾಂತಿಯುತ ಪುನರೇಕೀಕರಣದ ಹಾದಿಯಲ್ಲಿ ತೊಡಕಾಗಿರುವ ಪ್ರಮುಖ ಅಂಶ.

ಅಮೇರಿಕಾ ಸಂಯುಕ್ತ ಸಂಸ್ಥಾನ ಹಾಗೂ ಕೈಗೊಂಬೆ ಆಡಳಿತ ಪ್ರತಿ ವರ್ಷ, ಹಿಂದಿನ ವರ್ಷಕ್ಕಿಂತ ದೊಡ್ಡ ಪ್ರಮಾಣದಲ್ಲಿ ಜಂಟೀ ಸೈನಿಕ ಸಮರಾಭ್ಯಾಸ ನಡೆಸುತ್ತಿದ್ದಾರೆ. ಅಲಿಪ್ತ ಚಳವಳಿಯ ಸದಸ್ಯರಾಷ್ಟ್ರವಾದ ಕೊರಿಯಾ ಪ್ರಜಾಪ್ರಭುತ್ವವಾದಿ ಜನತಾ ಗಣರಾಜ್ಯದ ವಿರುದ್ಧ ಸತತವಾಗಿ ಸೈನಿಕ ಪ್ರಚೋದನೆಗಳನ್ನು ನಡೆಸುತ್ತಿದ್ದಾರೆ. ಹಲವು ಅಲಿಪ್ತ ದೇಶಗಳು ದಕ್ಷಿಣ ಕೋರಿಯಾಕ್ಕೆ ಮಾನ್ಯತೆ ಇಡಿಲ್ಲ. ಅವೆಲ್ಲಾ ಒಂದೊಂದಾಗಿ ಈ ಅಂತರ್ ಸಂಸದೀಯ ಸಂಘದ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸುತ್ತಿವೆ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್

೪೬ನೇ ವಾರ್ಷಿಕ ಮಹಾಸಭೆ

ಈ ಸಮಾಜದ ಬದಲಾವಣೆ ಮಾಡಲು ಕಾರ್ಮಿಕ ವರ್ಗದಿಂದ ಮಾತ್ರ ಸಾಧ್ಯವೇ ಹೊರತು ಬಂಡವಾಳ ಶಾಹಿಗಳಿಂದಲ್ಲ ಎಂದು ಶಾಸಕ ಕಾ। ಪಿ. ರಾಮಚಂದ್ರರಾಯರು ಎ. ಕೆ. ಪ್ರೆಸ್‌ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ 46 ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹೇಳಿದರು. ಅವರು ರಾಷ್ಟ್ರದ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿಗಳನ್ನು ವಿವರಿಸಿ, ಕಾರ್ಮಿಕರು ಸಂಘಟಿತರಾಗಿ ನಮ್ಮ ಆರ್ಥಿಕ ಬೇಡಿಕೆಗಳಿಗೋಸ್ಕರ ಹೋರಾಡುವ ಜತೆಯಲ್ಲಿ, ತಮ್ಮ ನೆರೆಹೊರೆಯ ಜನರ ನ್ಯಾಯವಾದ ಬೇಡಿಕೆಗಳನ್ನು ಬೆಂಬಲಿಸುವುದು ಮಾತ್ರವಲ್ಲದೆ ಈ ಸಮಾಜದಲ್ಲಿ ಬೇರೂರಿರುವ ಲಂಚ ಮತ್ತು ಭ್ರಷ್ಟಾಚಾರಗಳ ವಿರುದ್ಧ ಹೋರಾಡಲು ಕಾರ್ಮಿಕರಿಗೆ ಕರೆ ಕೊಟ್ಟರು.

ಪ್ರಾರಂಭದಲ್ಲಿ ಯೂನಿಯನ್ನಿನ ಉಪಾಧ್ಯಕ್ಷರಾದ ಕಾ। ಜಿ. ಉಮಾನಾಥ್‌ರು ಬಂದ ಸಭಿಕರನ್ನು ಮತ್ತು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಕಾ। ಬಿ. ಭುಜಂಗ ಮಾರ್ಲರು ಮಂಡಿಸಿದವಾರ್ಷಿಕ ವರದಿಯನ್ನು ಕೋಶಾಧಿಕಾರಿ ಕಾ। ಶೀನಪ್ಪ ಅಂಜನ್ ಮಂಡಿಸಿದ ವಾರ್ಷಿಕ ಲೆಕ್ಕ ಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ನಂತರ ಇತರ ಸಂಘಟನೆಗಳಿಂದ ಬಂದ ಸಂದೇಶಗಳನ್ನು ಓದಲಾಯ್ತು.

ನಂತರ ಮುಂದಿನ ವರ್ಷಕ್ಕೆ ಕಾ। ಪಿ. ರಾಮಚಂದ್ರರಾವ್, ಅಧ್ಯಕ್ಷರಾಗಿಯೂ, ಕಾ। ಕೆ. ಮೂಸಬ್ಬ ಕಾ। ಯು. ಪಿ. ಡಿಸೋಜ ಮತ್ತು ಕಾ। ವಸಂತ ಇವರುಗಳು ಉಪಾಧ್ಯಕ್ಷರುಗಳಾಗಿಯು, ಕಾ। ಬಿ. ಉಮಾನಾಥ, ಕಾರ್ಯದರ್ಶಿಯಾಗಿಯೂ, ಕಾ। ಬಿ. ಭುಜಂಗ ಮಾರ್ಲ ಕಾ। ಸದಾಶಿವ ಶೆಟ್ಟಿ ಮತ್ತು ಕಾ। ಕೆ. ಮಂಜುನಾಥ ಇವರುಗಳು ಜತೆ ಕಾರ್ಯದರ್ಶಿಗಳಾಗಿಯೂ ಕಾ। ಶೀನಪ್ಪ ಅಂಜನ್ ಕೋಶಾಧಿಕಾರಿಯೂ, ಆಗಿರುವ 39 ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ 4 ಮಂದಿಯನ್ನು ಆಮಂತ್ರಿತರನ್ನಾಗಿಯೂ ಸೇರಿಸಲಾಯಿತು.

ವಾರ್ಷಿಕ ಮಹಾಸಭೆ

ತಾರೀಖು 7-8-1983 ರಂದು ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ನಿನ ಸಭಾ ಭವನದಲ್ಲಿ ಕಾ. ಪಿ. ರಾಮಚಂದ್ರರಾವ್. ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಕ್ಯಾಶೂನಟ್ ಎಂಡ್ ಅಲೈಡ್ ವರ್ಕರ್ಸ್ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಜರಗಿತು. ಹಿಂದಿನ ವರ್ಷದ ವರದಿ ಮತ್ತು ಲೆಕ್ಕ ಪತ್ರವನ್ನು ಮಹಾಸಭೆಯು ಚರ್ಚಿಸಿ ಅಂಗೀಕರಿಸಲ್ಪಟ್ಟಿತು. ಸಂಘದ ಉಪಾಧ್ಯಕ್ಷ ಕಾ। ಜಾನಮ್ಮರವರು ಅಗಲಿದ ನಮ್ಮ ನಾಯಕರಾದ ಕಾ। ಪ್ರಮೋದ್‌ದಾಸ್ ಗುಪ್ತಾ ಕಾ. ಎಂ. ಆರ್. ವೆಂಕಟರಾಮನ್, ಮಾಜಿ. ಎಂ. ಎಲ್. ಎ. ಕಾ। ಗಂಗಾಧರ ನಮೋಶಿ, ಕಾ। ಆರೋಕ್ಯದಾಸ್ ಮತ್ತು ಇತರ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯ ಓದಿದರು. ಸಭೆ ಎದ್ದು ನಿಂತು ಅಗಲಿದ ನಾಯಕರಿಗೆ ಗೌರವ ಸೂಚಿಸಿತು.

ಮುಂದಿನ ವರ್ಷಕ್ಕೆ ಕಾ। ಪಿ. ರಾಮಚಂದ್ರರಾವ್ ಎಂ. ಎಲ್ ಎ. ಅಧ್ಯಕ್ಷರಾಗಿಯೂ ಕಾ। ಜಾನಮ್ಮ, ಕಾ। ದೇವಮ್ಮ ಕಾ। ದುಗ್ಗಮ್ಮರವರು ಉಪಾಧ್ಯಕ್ಷರಾಗಿಯೂ, ಕಮಲಾಕ್ಷಿಯಂ. ಬಂಗೇರರು ಪ್ರಧಾನಕಾರ್ಯದರ್ಶಿಯಾಗಿಯೂ, ಕಾ। ಶಾಂಭೆ ಕಾ। ವಾರಿಜ, ಕಾ। ದೇವಕಿ ಜೊತೆ ಕಾರ್ಯದರ್ಶಿಗಳಾಗಿಯೂ, ಕೋಶಾಧಿಕಾರಿಯಾಗಿ ಕಾ। ಸೀತ ಇರುವ ಪಧಾಧಿಕಾರಿಗಳ ಮತ್ತು 18 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಸಭೆಯಲ್ಲಿ ಆರಿಸಲಾಯ್ತು.

ಹರ್ಬರ್ಟ್ಸ್ ಇಂಡಿಯಾ

(5ನೇ ಪುಟದಿಂದ)

ನಾರಾಯಣರಾವ್, ಕಾಂ. ಸಿ. ಕುಂಜಪ್ಪನ್, ಕಾಂ. ಸುರೇಶ್‌ರಾಯಕರ್ ರವರು ಕ್ರಮವಾಗಿ ಅಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಖಜಾಂಚಿಯಾಗಿ ಅವಿರೋಧವಾಗಿ ಪುನರಾಯ್ಕೆಗೊಂಡಿದ್ದಾರೆ. ಅಲ್ಲದೆ ಕಾಂ. ಶೃಂಗೇಶ್ವರ, ಕಾಂ. ರಿಚರ್ಡ್ ಡಿಸಿಲ್ವಾ ಮತ್ತು ಕಾಂ. ಲಾರೆನ್ಸ್ ಮಂಡೋನ್ಸ ರವರು ಕ್ರಮವಾಗಿ ಉಪಾಧ್ಯಕ್ಷ, ಸಹಕಾರ್ಯದರ್ಶಿಗಳಾಗಿ ಪುನರಾಯ್ಕೆಗೊಂಡಿದ್ದಾರೆ. ಚುನಾವಣಾಧಿಕಾರಿಗಳಾಗಿ ಕಾ. ಕೆ. ಆರ್. ವೆಂಕಟೇಶಗೌಡರವರು ಕಾರ್ಯನಿರ್ವಹಿಸಿದ್ದಾರೆ. ಪ್ರಾರಂಭದಲ್ಲಿ ಕಾ: ಸಿ: ಕುಂಜಪ್ಪನ್ ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಎಲ್. ಬಿ. ಶೃಂಗೇಶ್ವರ ರವರು ವಂದನಾರ್ಪಣೆ ಮಾಡಿದರು

ಸಮಾವೇಶವನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣರಾವ್‌ರವರುಮಾತನಾಡುತ್ತಾ, ಪ್ರಪಂಚವು ಎದುರಿಸುತ್ತಿರುವ ಯುದ್ಧ ಭೀತಿ ಸಮಾಜವಾದಿ ದೇಶಗಳ ಮೇಲೆ ಬಂಡವಾಳಶಾಹಿ ಶಕ್ತಿಗಳು ನಡೆಸುತ್ತಿರುವ ಸಂಚನ್ನು ವಿವರಿಸಿದರು.

ಆರನೆಯ ಅಂಕ್ಟಾಡ್ ಅಧಿವೇಶನ

(2ನೇ ಪುಟದಿಂದ)

ಆರ್ಥಿಕ ವ್ಯವಸ್ಥೆಯನ್ನು ತಮ್ಮ ಅಧೀನಕ್ಕೆ ಮಾಡಿಕೊಂಡವು. ಈ ಸಂಸ್ಥೆಗಳ ಮೇಲೆ ತಮ್ಮ ಸಂಪೂರ್ಣ ನಿಯಂತ್ರಣವಿರುವುದರಿಂದ ಜಾಗತಿಕ ಹೊಸ ಆರ್ಥಿಕ ವ್ಯವಸ್ಥೆಯ ಸಾಧನೆಗಾಗಿ ಎಲ್ಲ ದೇಶಗಳಿಗೂ ಸಮಾನ ಅವಕಾಶ ಸಿಗುವಂತೆ ಇವುಗಳನ್ನು ಪುನರ್ರಚಿಸಲು ಬಿಡುವುದಿಲ್ಲ. ಸಮಾಜವಾದಿ ರಾಷ್ಟ್ರಗಳ ವಿರುದ್ಧ ಅಣು ಅಸ್ತ್ರಗಳಂತಹ ವಿನಾಶಕಾರಿ ಶಸ್ತ್ರಾಸ್ತ್ರಗಳು ತೀವ್ರ ಪೈಪೋಟಿಗಿಳಿದು, ಆರ್ಥಿಕ ಅಭಿವೃದ್ಧಿಯನ್ನು ಅಲಕ್ಷಿಸಿ ಉಂಟಾದ ದುಃಸ್ಥಿತಿಗಳ ದುಷ್ಪರಿಣಾಮಗಳನ್ನು ಬಡ ರಾಷ್ಟ್ರಗಳ ಮೇಲೆ ಹೇರಲಾಗುತ್ತಿದೆ. ಹೊಸತಾಗಿ ಸ್ವತಂತ್ರಗೊಂಡ ದೇಶಗಳು ಆಂತರಿಕವಾಗಿ ಪಾಳೆಯಗಾರಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಗಳನ್ನು ಕಿತ್ತೊಗೆಯದೆ, ತಮ್ಮ ಆರ್ಥಿಕ ಅಭಿವೃದ್ಧಿಗೆ ಸಹಾಯ, ಸಹಕಾರಗಳನ್ನೇ ನಂಬಿಕೊಂಡಿರುವುದರಿಂದ ತೀವ್ರ ಆರ್ಥಿಕ ದುಃಸ್ಥಿತಿಗೊಳಗಾಗಿವೆ.

ಸದ್ಯದ ಜಾಗತಿಕ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯು ಹೀಗಿರುತ್ತಾ, ಅಭಿವೃದ್ಧಿ ಹೊಂದಿದ ಶ್ರೀಮಂತ ಬಂಡವಾಳಶಾಹಿ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ಬಡ ರಾಷ್ಟ್ರಗಳೊಂದಿಗೆ ಸಹಕರಿಸುವುವು ಎಂಬ ಅಂಕ್ಟಾಡ್‌ನ ನಿರೀಕ್ಷೆಯು ನಿರಾಧಾರವಾದುದು ಒಂದೆಡೆ ಬಂಡವಾಳಶಾಹಿ ಮತ್ತು ಸಮಾಜವಾದಗಳೊಳಗಿನ ವೈರುಧ್ಯ, ಇನ್ನೊಂದೆಡೆಗೆ ಬಂಡವಾಳಶಾಹಿ ಹಾಗೂ ಅದರ ಹೊಸವಸಾಹತುಗಳಾದ ಅಭಿವೃದ್ಧಿಶೀಲ ರಾಷ್ಟ್ರಗಳೊಳಗಿನ ವೈರುಧ್ಯ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಬಂಡವಾಳ ಮತ್ತು ಕಾರ್ಮಿಕರ ನಡುವಿನ ವೈರುಧ್ಯ ಇವುಗಳಿಂದ ನಿರೀಕ್ಷಿಸಿದ ಹೊಸ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ಅಸಾಧ್ಯವಾಗುತ್ತಿದೆ. ಈ ವೈರುಧ್ಯಗಳು ಹರಿತಗೊಂಡು ಬಂಡವಾಳಶಾಹಿ-ಹೊಸ ಸಾಮ್ರಾಜ್ಯಶಾಹಿ ವ್ಯವಸ್ಥೆ ಸಂಪೂರ್ಣ ಸೋತು ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿಯೂ ಸಾಮಾಜಿಕ ಕ್ರಾಂತಿಯಾಗಿ ಸಮಾಜವಾದಿ ಸಮಾಜ ಸ್ಥಾಪನೆಯಾದಾಗ ಮಾತ್ರ ಈಗ ಕನಸುಕಾಣುತ್ತಿರುವ ಹೊಸ ಜಾಗತಿಕ ಆರ್ಥಿಕ ವ್ಯವಸ್ಥೆ ನನಸಾದೀತು. ಆದರೆ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಆಳುವ ವರ್ಗ ಬಂಡವಾಳಶಾಹಿಆರ್ಥಿಕ ಮಾರ್ಗವನ್ನು ಬಿಟ್ಟುಬಿಡಲು ತಯಾರಿಲ್ಲ.

ಅಂಕ್ಟಾಡಿನ ಗೆಲುವು :

ಅಂಕ್ಟಾಡ್ ಅಧಿವೇಶನದಲ್ಲಿ ಅಮೇರಿಕದ ನಿಷ್ಠೂರ ಹಾಗೂ ವಿರೋಧಿ ಧೋರಣೆಯಿಂದಾಗಿ ಅದರ ವಿರುದ್ಧ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಐಕ್ಯತೆ ಹೆಚ್ಚುತ್ತಿದೆ. ಕೆಲವು ಮೂಲಭೂತ ವಿಷಯಗಳಲ್ಲಿ ಅಮೇರಿಕ ಹಾಗೂ ಇತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳೊಳಗೇ ಭಿನ್ನಾಭಿಪ್ರಾಯ ಹೆಚ್ಚುತ್ತಿದೆ. ಅಂಕ್ಟಾಡ್‌ನಲ್ಲಿ ಸೂಚಿಸಿದ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅನೇಕ ಬೇಡಿಕೆಗಳನ್ನು, ಆಶೋತ್ತರಗಳನ್ನು, ಸೋವಿಯತ್ ಯೂನಿಯನ್ ಮಿತ್ರರ ಸಮಾಜವಾದಿ ದೇಶಗಳು ಸಂಪೂರ್ಣವಾಗಿ ಬೆಂಬಲಿಸಿವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಸ್ವತಂತ್ರ, ಸ್ವಾವಲಂಬಿ ಆರ್ಥಿಕ ಪ್ರಗತಿ ಸಾಧಿಸಲು, ಕೃಷಿ ಕೈಗಾರಿಕೆ, ತಂತ್ರಜ್ಞಾನ ರಕ್ಷಣೆ ವಿಷಯಗಳಲ್ಲಿ ಪ್ರಗತಿ ಸಾಧಿಸಲು ಸಮಾಜವಾದಿ ರಾಷ್ಟ್ರಗಳು ಸಹಕರಿಸುತ್ತಿವೆ. ವಿಮೋಚನಾ ಸಮರಗಳಲ್ಲಿ ಅಮೇರಿಕ ಹಸ್ತಕ್ಷೇಪ ಮಾಡುತ್ತಿರುವುದನ್ನೂ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಂತರಿಕ ವಿಷಯಗಳನ್ನು ಅಮೇರಿಕ ಸಾಲ ಸಹಾಯಗಳ ನೆವದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದನ್ನು ಅಂಕ್ಟಾಡ್ ಒಮ್ಮತದಿಂದ ವಿರೋಧಿಸಿದೆ. ಅಮೇರಿಕ ಎಲ್ಲರಿಂದಲೂ ದೂರವಾಗುತ್ತಿದೆ. ಎಲ್ಲರ ಕೋಪ-ಅಸಮಾಧಾನಕ್ಕೊಳಗಾಗುತ್ತಿದೆ, ಈ ಹೊಸ ವಿದ್ಯಮಾನ ಅದರ ಆಕ್ರಮಣಕಾರಿ ಧೋರಣೆಗೆ ಪ್ರಬಲ ತಡೆಯಾದೀತು. ಅಂಕ್ಟಾಡ್‌ನ ಸತತ ಸೋಲಿನಿಂದಾಗಿ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಅಭಿವೃದ್ಧಿಯು ಅಂತಿಮವಾಗಿ ವಿದೇಶೀ, ಸಾಲ, ಸಹಾಯಗಳಿಂದ ಸಾಧ್ಯವಾಗದೆ ಆಂತರಿಕವಾಗಿ ಮೂಲಭೂತ ಸಾಮಾಜಿಕ ಬದಲಾವಣೆಯಿಂದಲೇ ಸಾಧ್ಯ ಎಂಬ ಅರಿವು ಸ್ಪಷ್ಟವಾಗುತ್ತಿದೆ.

ವಿಜಯನಗರ ಕಾರ್ಖಾನೆಗೆ ಒತ್ತಾಯಿಸಿ ಪ್ರದರ್ಶನ

ಹೊಸಪೇಟೆ

25-8-83ರಂದು ಹೊಸಪೇಟೆ ನಗರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ ಜಂಟಿಯಾಗಿ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ, ಮತ್ತು ಇತ್ತೀಚೆಗೆ ಬೇಜವಾಬ್ದಾರಿ ಹೇಳಿಕೆ ನೀಡಿದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಖಂಡಿಸಿ ಬೃಹತ್‌ಪ್ರಮಾಣದಲ್ಲಿ ಸೈಕಲ್ ಮೆರವಣಿಗೆಯನ್ನು ಮಾಡಲಾಯಿತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೂ ನಗರ ಹಾಗೂ ಸುತ್ತಲಿನ ವಲಯದಿಂದ ಯುವ ಜನ ಸಂಗಾತಿಗಳು ರಿಕ್ಷಾ ಚಾಲಕರು ಅಲ್ಲದೇ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಅತ್ಯುತ್ಸಾಹದಿಂದ ಮೆರವಣಿಗೆಯಲ್ಲಿ ಭಾಗವಹಿಸಿದರು.

ವಿದ್ಯಾರ್ಥಿ-ಯುವ ಜನರ (SFI DYFI) ಐಕ್ಯಕಾರ್ಯಚರಣೆ ದಿನದಿಂದ ದಿನಕ್ಕೆ ಶಕ್ತಿಯುತವಾಗಿ ಬೆಳೆಯುತ್ತಿದ್ದು. ಅದರನ್ವಯ ಇದು ಎರಡನೆಯದಾಗಿದೆ.

ಮನವಿ ಪತ್ರವನ್ನ ತಹಶೀಲ್ದಾರ್ ಅವರಿಗೆ ಸಲ್ಲಿಸಿ, ನಂತರ ತಾಲೂಕು ಆಫೀಸ್ ಆವರಣದಲ್ಲಿ ಸಭೆಯನ್ನುದ್ದೇಶಿಸಿ ಕಾ। ಗುರುಶಾಂತ್ ಮಾತನಾಡಿದರು.

ಧಾರವಾಡ

ಡಿ.ವೈ.ಎಫ್.ಐ. ರಾಜ್ಯಸಮಿತಿಯ ಕರೆಯ ಮೇರೆಗೆ ಧಾರವಾಡ ಜಿಲ್ಲಾ ಘಟಕವು "ವಿಜಯನಗರ ಉಕ್ಕು ಕರ್ನಾಟಕದ ಹಕ್ಕು" ಎಂಬ ಘೋಷಣೆಯೊಂದಿಗೆ ಹುಬ್ಬಳ್ಳಿ ತಹಶೀಲದಾರ ಕಚೇರಿಯ ಎದುರು ತಾ॥ 25-8-83 ಒಂದು ದಿನದ ಧರಣಿ ಸತ್ಯಾಗ್ರಹವನ್ನು ನಡೆಸಿತು.

ಸಂಜೆ 5ಕ್ಕೆ ತಹಶೀಲದಾರರಿಗೆ ಮನವಿಯನ್ನು ಅರ್ಪಿಸಲಾಯಿತು. ನಂತರ 500 ಜನರ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಇದಗ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಜಿಲ್ಲಾ ಸಂಚಾಲಕ ಕಾ। ಜಿ. ಸಿ. ವೈ. ಮಠ್ ಕಾರ್ಖಾನೆಯ ಬಗ್ಗೆ ವಿವರವಾಗಿ ತಿಳಿಸಿದರು, ಕಾ। ಸ್ವಾಮಿ ನಿತ್ಯಾನಂದ್‌ಜಿ ಇವರು ಯುವಕ ವಿದ್ಯಾರ್ಥಿಗಳಜವಾಬ್ದಾರಿ ಬಗ್ಗೆ ತಿಳಿಸಿದರು. ಶಿಕ್ಷಕ ಪಿ. ಬಾಲರೆಡ್ಡಿಯವರು ಮತ್ತು ಕಾ। ವಿ. ಜಿ. ಕಮ್ಮಾರ ಇವರು ಮಾತನಾಡಿದರು. ಕೊನೆಯಲ್ಲಿ ಹುಬ್ಬಳ್ಳಿ ಸಂಚಾಲಕ ಕಾ। ಚಿದಾನಂದ ಹಳ್ಳಿಯವರು ವಂದಿಸಿದರು.

ಮೈಸೂರು :

ವಿಜಯನಗರ ಉಕ್ಕಿನ ಸ್ಥಾವರವನ್ನು ಕೂಡಲೇ ಆರಂಭಿಸುವಂತೆ ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ಮೈಸೂರು ನಗರ ಘಟಕವು 25-8-1483ರಂದು ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಿ, ಮನವಿ ಪತ್ರವನ್ನು ಅರ್ಪಿಸಿತು.

ಮಾನವ ಕುಲ ಸೃಷ್ಟಿಸಿದ ಎಲ್ಲ ಸಂಪತ್ತಿನಿಂದ ನಿನ್ನ ಮನಸ್ಸನ್ನು ಪುಷ್ಟಿಗೊಳಿಸಿಕೊಂಡರೆ ಮಾತ್ರ ನೀನು ಒಬ್ಬ ಕಮ್ಯುನಿಸ್ಟನಾಗಬಲ್ಲೆ.

-ಲೆನಿನ್

REG KRNU-188

MAG (2) PRB DECR 319/78-79

ಸೆಪ್ಟಂಬರ್ 4, 1983

ಬೆಲೆ ಏರಿಕೆ ವಿರೋಧೀ ದಿನಾಚರಣೆ

ಸಿಂಧನೂರು

ಆಗಸ್ಟ್ 11ರಂದು ಸಿಂಧನೂರಿನಲ್ಲಿ ಸಿ.ಪಿ.ಐ (ಎಮ್) ಪಕ್ಷದ ನೇತೃತ್ವದಲ್ಲಿ ಬೆಲೆಯೇರಿಕೆ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಪುರಸಭೆಯಿಂದ ತಹಶೀಲ್ ಕಛೇರಿಯನ್ನು ತಲುಪಿದ ಮೆರವಣಿಗೆಯಲ್ಲಿ 100 ಮಹಿಳೆಯರು ಸೇರಿದಂತೆ, 300 ಜನ ಭಾಗವಹಿಸಿದ್ದರು.

ನಂತರ ಜರುಗಿದ ಸಭೆಯನ್ನು ಶ್ರೀ ಪಕ್ಷದ ಕಾರ್ಯದರ್ಶಿ ಕಾ। ಸಿ. ಎಸ್ ಹಿರೇಮಠ ಹಾಗೂ ಸಂಗಾತಿಗಳಾದ ಬಿ. ಲಿಂಗಪ್ಪ, ವೃಷಭೇಂದ್ರಯ್ಯ ಮಾತನಾಡಿದರು.

ಹೊಸಪೇಟೆ

ಕರ್ನಾಟಕ ರಾಜ್ಯಾದ್ಯಂತ ನಡೆಸಲಾದ ಬೆಲೆ ಏರಿಕೆ ವಿರೋಧಿ ದಿನಾಚರಣೆಯನ್ನು ಹೊಸಪೇಟೆ ಯಲ್ಲಿ ಆಗಸ್ಟ್ 11 ರಂದು SFI ಮತ್ತು DYFI ಸಂಯುಕ್ತವಾಗಿ ಆಚರಿಸಿತು. ಈ ಕಾರ್ಯಕ್ರಮದ ಅಂಗವಾಗಿ ಒಟ್ಟು ಸುಮಾರು 600 ಜನ ವಿದ್ಯಾರ್ಥಿಗಳು ಯುವಜನರು ಹಾಗೂ ಹೆಣ್ಣು ಮಕ್ಕಳು ಉದ್ಘೋಷಣೆಗಳೊಂದಿಗೆ ಬೃಹತ್ ಮೆರವಣಿಗೆಯಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಹಾದು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಮನವಿಯನ್ನು ಸಲ್ಲಿಸಿ ಸ್ಥಳದಲ್ಲಿಯೇ DYFI ನ ಕಾ। ಟಿ ಹುಸೇನ್‌ಸಾಬ್ ಸಾರ್ವಜನಿಕರನ್ನು ಸ್ವಾಗತಿಸುತ್ತಾ, ಬೆಲೆ ಏರಿಕೆ ಬಗ್ಗೆ ತಿಳಿಸಿದರು. ನಂತರ SFI ನಗರ ಸಮಿತಿ ಅಧ್ಯಕ್ಷ ವಿ. ಎಸ್ ಕೋದಂಡರಾಮ ಸಭೆಯನ್ನುದ್ದೇಶಿಸಿ ಮಾತ ನಾಡುತ ಜನಪರ ಎಂದು ಹೇಳಿ ಕೊಳ್ಳುತ್ತಿರುವ ಇಂದಿನ ಜನತಾ ಸರ್ಕಾರ ಬಡವರನ್ನು ಅಗತ್ಯ ವಸ್ತುಗಳ ಬೆಲೆಯನ್ನೇರಿಸಿ ಇನ್ನೂ ಕಡುಬಡವರನ್ನಾಗಿಸುತ್ತಿದೆ. ಇದನ್ನು ತಕ್ಷಣ ನಿಲ್ಲಿಸಲು ಒತ್ತಾಯ ತರಬೇಕಾಗಿದೆ ಎಂದು ತಿಳಿಸಿದರು.

ಮುತ್ತಕೋಡ

ರೈತ ಸಂಘ ರಚನೆ

ದಿನಾಂಕ 23-7-83ರಂದು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮುತ್ತಕೋಡ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಶಾಖೆ ಪ್ರಾರಂಭ ಮಾಡಲಾಯಿತು.

ಮುತ್ತಕೋಡ ಗ್ರಾಮದ ರೈತ ಸಂಘ ಪ್ರಾರಂಭಮಾಡಲು ನೀರಲಕೋಡ ಘಟಕದ ಸಂಗಾತಿ ಕಾ। ವೆಂಕೋಬ ರಾವ್ ಮತ್ತು ಶರಣಯ್ಯ ಹಾಗೂ ಲಿಂಗಯ್ಯ ಈ ಸಭೆಯಲ್ಲಿ ಹಾಜರಿದ್ದರು ಇವರು ರೈತರ ಸಮಸ್ಯೆಗಳೇನು, ರೈತರಲ್ಲಿ ಒಗ್ಗಟ್ಟಾಗಿ ಇರುವಂತಾ ಅವಶ್ಯಕತೆಗಳನ್ನು ವಿವರಿಸಿ ಹೇಳಿ ಸಂಘವನ್ನು ಬಲಪಡಿಸಲು ಕರೆ ನೀಡಿದರು. ಅವರ ಉದ್ದೇಶದ ಪ್ರಕಾರ ಮುತ್ತಕೋಡ ಗ್ರಾಮದ ರೈತಾಪಿ ಜನ ಕೆಲ್ಲಾ ಒಪ್ಪಿಕೊಂಡು ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿದರು.

ಕಾರ್ಮಿಕ ಸಂಘಗಳ ಎರಡನೇ ರಾಷ್ಟ್ರೀಯ ಸಮಾವೇಶ

ರಾಷ್ಟ್ರೀಯ ಪ್ರಚಾರ ಸಮಿತಿಯ ಆಶ್ರಯ ದಲ್ಲಿ ಆಗಸ್ಟ್ 21ರಂದು ನವದೆಹಲಿಯಲ್ಲಿ ಎರಡನೆಯ ರಾಷ್ಟ್ರೀಯ ಕಾರ್ಮಿಕ ಸಂಘಗಳ ಸಮಾವೇಶ ನಡೆಯಿತು, ಅದರಲ್ಲಿ ವಿವಿಧ ರಾಜ್ಯಗಳಿಂದ 6,000 ಕ್ಕಿಂತಲು ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು ಮತ್ತು 40 ಕ್ಕಿಂತಲೂ ಹೆಚ್ಚು ರಾಷ್ಟ್ರೀಯ ಕೈಗಾರಿಕಾ ಫೆಡರೇಶನ್‌ಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಎಂಟು ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸಿದ ಎಂಟು ಜನ ಮುಖಂಡರುಗಳನ್ನೊಳಗೊಂಡ ಅಧ್ಯಕ್ಷ ಮಂಡಲಿ ಸಮಾವೇಶದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿತು.

ರಾಷ್ಟ್ರೀಯ ಪ್ರಚಾರ ಸಮಿತಿಯ ಪರವಾಗಿ ಎ.ಐ.ಟಿ.ಯು.ಸಿ.ಯ ಪ್ರ. ಕಾರ್ಯದರ್ಶಿ ಇಂದ್ರಜಿತ್ ಗುಪ್ತ ಅವರು ನಿರ್ಣಯ ಮಂಡಿಸಿ ಮಾತನಾಡಿದರು. ಅವರು ತಮ್ಮ ಭಾಷಣದಲ್ಲಿ 1981 ರ ಸಮಾವೇಶದ ನಂತರದ ಬೆಳವಣಿಗೆಗಳು, ಸಾರ್ವಜನಿಕ ಉದ್ಯಮದ ಕಾರ್ಮಿಕರು ಸರ್ಕಾರದ ಧೋರಣೆಗಳನ್ನು ಸೋಲಿಸಿ ಗಳಿಸಿದ ವಿಜಯ, ಆರ್ಥಿಕ ಅಭಿವೃದ್ಧಿ ಮತ್ತು ಮುಂದಿನ ಕಾರ್ಯ ಕ್ರಮಗಳ ಕುರಿತು ರಾಷ್ಟ್ರೀಯ ಪ್ರಚಾರ ಸಮಿತಿ ಮಾಡಿದ ಸೂಚನೆ, ನ್ಯೂಕ್ಲಿಯರ್ ಯುದ್ಧದ ಅಪಾಯ ಮುಂತಾದವುಗಳ ಕುರಿತು ಮಾತನಾಡಿದರು.

ಸಿ. ಐ. ಟಿ. ಯು. ನ ಉಪಾಧ್ಯಕ್ಷರಾದ ಕಾ॥ ಪಿ. ರಾಮಮೂರ್ತಿ ಅವರು ಸರ್ಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧೀ ಧೋರಣೆ ಮತ್ತು ಜನ-ವಿರೋಧೀ ಧೋರಣೆಗಳನ್ನು ಖಂಡಿಸಿ ಕಾರ್ಮಿಕ ವರ್ಗವು ಸರ್ಕಾರದ ಧೋರಣೆಗಳಿಗೆ ಬದಲಿಯಾದ ಧೋರಣೆಗಳಿಗಾಗಿ ಹೋರಾಟ ನಡೆಸಲು ಸಿದ್ಧರಾಗಬೇಕೆಂದು ಕರೆ ನೀಡಿದರು. ಸಾಮ್ರಾಜ್ಯಶಾಹಿಗಳಿಂದ ಉಂಟಾಗಿರುವ ಅಪಾಯ ಮತ್ತು ಬಹು ರಾಷ್ಟ್ರೀಯ ಸಂಸ್ಥೆಗಳ ಪ್ರವೇಶದ ಕುರಿತು ವಿವರಿಸಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳಲ್ಲದೆ 48 ರಾಷ್ಟ್ರೀಯ ಫೆಡರೇಷನ್‌ಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಮಾತನಾಡಿದರು.

ಬಿ.ಎಂ.ಎಸ್.ಗೆ ಸೇರ್ಪಡೆಯಾಗಿರುವ ಫೆಡರೇಶನ್‌ಗಳು 'ರಾಷ್ಟ್ರೀಕರಣ' ವನ್ನು ವಿರೋಧಿಸಿ ಭಾಷಣಗಳನ್ನು ಮಾಡಿದವು ಎಂಬುದು ಗಮನಿಸಬೇಕಾದ ಅಂಶ.

ನಂತರ ಸಣಬು ಕಾರ್ಮಿಕ ಫೆಡರೇಶನ್‌ನ ವತಿಯಿಂದ ಮಾತನಾಡಿದ ಮಹಮ್ಮದ್ ಅಮೀನ್ ಅವರು ಮೇಲಿನ ಎರಡೂ ಅಂಶಗಳನ್ನು ವಿರೋಧಿಸಿ ಮಾತನಾಡಿದರು. ಸಣಬು ವ್ಯಾಪಾರಿಗಳು ಹೇಗೆ ಬೆಳೆಗಾರರನ್ನು ಮತ್ತು ಕಾರ್ಮಿಕರನ್ನು ಶೋಷಿಸಿ ಅಪಾರ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. 'ರಾಷ್ಟ್ರೀಕರಣ' ವು ಕಾರ್ಮಿಕರ ಹಿತರಕ್ಷಣೆಯ ದಿಕ್ಕಿನಲ್ಲಿ ಹೇಗೆ ಸಹಾಯ ಮಾಡುತ್ತದೆ ಎಂದು ವಿವರಿಸಿದರು.

ಸಮಾವೇಶವು ಬೆಲೆಯೇರಿಕೆ ವಿರುದ್ಧ; ರೋಗಗ್ರಸ್ತ ಉದ್ಯಮಗಳನ್ನು ರಾಷ್ಟ್ರೀಕರಿಸುವ ಅಥವ ಕಾರ್ಮಿಕರಿಗೆ ಒಪ್ಪಿಸುವ ಕುರಿತು; ಐ. ಎಂ. ಎಫ್. ವಿಶ್ವಬ್ಯಾಂಕ್, ಮತ್ತಿತರ ವಿದೇಶಿ ಸಂಸ್ಥೆಗಳಿಂದ ಸಾಲಾ ಪಡೆಯುವುದರ ವಿರುದ್ಧ; ಬಹು ರಾಷ್ಟ್ರೀಯ ಸಂಸ್ಥೆಗಳ ಚಟುವಟಿಕೆಗಳನ್ನು ನಿರ್ಬಂಧಿಸುವ, ಮತ್ತು ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿ ನಮ್ಮ ತಂತ್ರಜ್ಞರಿಗೆ, ವಿಜ್ಞಾನಿಗಳಿಗೆ, ಎಂಜಿನಿಯರುಗಳಿಗೆ ಪ್ರೋತ್ಸಾಹ ನೀಡಬೇಕೆಂದು ಒತ್ತಾಯ ಪಡಿಸುವ; ಸಾರ್ವಜನಿಕ ಉದ್ಯಮಗಳ ನಿರ್ವಹಣೆಯನ್ನು ಪ್ರಜಾಪ್ರಭುತ್ವೀಕರಣಗೊಳಿಸುವ ಕುರಿತು ನಿರ್ಣಯಗಳನ್ನು ಅಂಗೀಕರಿಸಿತು.

ಅಲ್ಲದೆ

1. ನವೆಂಬರ್ ಕೊನೆಯವೇಳೆಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಾವೇಶಗಳನ್ನು ನಡೆಸಬೇಕೆಂದು.
2. ಬೀಗಮುದ್ರೆ, ರಿಟ್ರೆಂಚ್‌ಮೆಂಟ್ ಲೆ-ಆಫ್ ಕುರಿತು ವಿಶೇಷ ಸಮಾವೇಶ ನಡೆಸ ಬೇಕೆಂದು.
3. ದುಡಿಯುವ ಮಹಿಳೆಯ ಕುರಿತು ವಿಶೇಷ ಸಮಾವೇಶ ನಡೆಸಲು.
4. ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಪ್ರದರ್ಶನ ಸಮಾವೇಶ ನಡೆಸುವುದು.
5. ಅಸಂಘಟಿತ ಕಾರ್ಮಿಕರ ವಿಶೇಷ ಸಮಾವೇಶ ನಡೆಸುವುದು.
6. 1984ರ ಬಜೆಟ್ ಅಧಿವೇಶನದ ಸಮಯದಲ್ಲಿ ಪಾರ್ಲಿಮೆಂಟಿನ ಎದುರು ಪ್ರದರ್ಶನ ನಡೆಸುವುದು ಮುಂತಾದ ಕಾರ್ಯಕ್ರಮಗಳನ್ನು ಸಮಾವೇಶ ಹಮ್ಮಿಕೊಂಡಿದೆ.

ಪಶ್ಚಿಮ ಬಂಗಾಲ ಎಡರಂಗ ಸರ್ಕಾರದ ಆರನೆಯ ವಾರ್ಷಿಕೋತ್ಸವ

ಸಿ. ಪಿ. ಐ. (ಎಂ) ನೇತೃತ್ವದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ತನ್ನ ಆರನೆಯ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಸೆಪ್ಟೆಂಬರ್ 6ರಿಂದ 9ರವರೆಗೆ ತನ್ನ ಸಾಧನೆಗಳ ಕುರಿತಾದ ಕಾರ್ಯಕ್ರಮವನ್ನು ನಡೆಸುತ್ತದೆ. ಈ ಕಾರ್ಯಕ್ರಮದ ಅಂಗವಾಗಿ ಪೋಸ್ಟರುಗಳ ಪ್ರದರ್ಶನ ಸಾಂಸ್ಕೃತಿಕ ಕಾರ್ಯಕ್ರಮಗಳು, ಚಲನ ಚಿತ್ರ ಪ್ರದರ್ಶನ, ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

ದಿನಾಂಕ 6ರ ಸಂಜೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಪಶ್ಚಿಮ ಬಂಗಾಲದ ವಾರ್ತಾ ಸಚಿವರಾದ ಶ್ರೀ ಪ್ರಭಾಸ್ ಫೋಧಿಕರ್ ಹಾಗೂ ಮತ್ತೊಬ್ಬ ಸಚಿವರು ಭಾಗವಹಿಸಲಿದ್ದಾರೆ.

ನಗರದ ಜನತೆ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳಲೆಂದು ಹಾರೈಸುತ್ತಾ 'ಐಕ್ಯರಂಗ' ಈ ಕಾರ್ಯಕ್ರಮಕ್ಕೆ ತನ್ನ ಶುಭಾಶಯವನ್ನು ಕೋರುತ್ತದೆ.

ಹೋರಾಟದ ಕಣದಲ್ಲಿ ಗಾರ್ಮೆಂಟ್ ಕಾರ್ಮಿಕರು

ಬೆಂಗಳೂರಿನಲ್ಲಿ ಸುಮಾರು ಎಂಟು ಸಾವಿರ ಕಾರ್ಮಿಕರು ಸಿದ್ಧಪಡಿಸಿದ ಉಡುಪುಗಳನ್ನು ತಯಾರಿಸುವ ಸಂಸ್ಥೆಯಾದ ಗೋಕುಲ್ ದಾಸ್ ಎಕ್ಸಪೋರ್ಟ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆ ಹಿಂದೂಜಾ ಎಂಬ ಹೆಸರಿನಲ್ಲಿ ಹಲವಾರು ಘಟಕಗಳನ್ನು ಹೊಂದಿದೆ.

ಈ ಘಟಕಗಳಲ್ಲಿ ಕೆಲಸ ಮಾಡುವ ಎಂಟು ಸಾವಿರ ಕಾರ್ಮಿಕರ ಪೈಕಿ 5000 ಮಹಿಳಾ ಕಾಮಿಕರು. ಈ ಕಾರ್ಮಿಕರು ಇತ್ತೀಚಿನವರೆಗೆ ಅಸಂಘಟಿತರಾಗಿ ಉಳಿದಿದ್ದು ಕಳೆದ ಮೇ ತಿಂಗಳಿನಲ್ಲಿ ಸಿ ಐ ಟಿ ಯು ಇವರನ್ನು ಸಂಘಟಿಸುವ ಕಾರ್ಯವನ್ನು ಪ್ರಾರಂಭಿಸಿ ಕಾರ್ಮಿಕರಿಗೆ ಕಾನೂನು ಬದ್ಧವಾದಂತಹ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸಿ ಹೋರಾಟವನ್ನು ಪ್ರಾರಂಭಿಸಿತು.

ಈ ಹೋರಾಟವನ್ನು ವಿಫಲಗೊಳಿಸಲು ಆಡಳಿತವರ್ಗ ದಿನಾಂಕ 13-8-83 ರಂದು ನಿರ್ಧರಿಸಿ ಮಲ್ಲೇಶ್ವರದಲ್ಲಿರುವ ಹಿಂದೂಜಾ ಕ್ಲೋತಿಂಗ್ ಕಂಪನಿ ಯುನಿಟ್ 1 ನ್ನು ಅಕ್ರಮವಾಗಿ ಮುಚ್ಚಿ, ಅಲ್ಲಿನ 500 ಕಾರ್ಮಿಕರಿಗೆ ಸೆಂಟ್ರಲ್‌ಮೆಂಟ್ ಮಾಡಿ ಮನೆಗಳಿಗೆ ಚೆಕ್‌ಗಳನ್ನು ಕಳುಹಿಸಿದರು. ಇದನ್ನು ವಿರೋಧಿಸಿ ಈ ಕಾರ್ಮಿಕರು 22.8.83ರಂದು ಹೋರಾಟ ಪ್ರಾರಂಭಿಸಿದರು, ಎಲ್ಲಾ ಘಟಕಗಳೂ ಇವರಿಗೆ ಸೌಹಾರ್ದ ಬೆಂಬಲ ನೀಡುವ ಸಲುವಾಗಿ ಕೆಲಸಕ್ಕೆ ಹಾಜರಾಗಲಿಲ್ಲ, ಕಾರ್ಮಿಕರು ಮೆರವಣಿಗೆಯ ಮೂಲಕ ಪ್ರಧಾನ ಕಛೇರಿಯ ಮುಂದೆ ಧರಣಿ ಪ್ರದರ್ಶನ ನಡೆಸಿದರು. 30-8-83ರಂದು ಬೆಳಿಗ್ಗೆ ಸುಮಾರು 200 ಕಾರ್ಮಿಕರು ಕಾರ್ಮಿಕ ಮಂತ್ರಿಯವರ ನಿವಾಸದ ಮುಂದೆ ಪ್ರದರ್ಶನ ನಡೆಸಿ ನ್ಯಾಯದೊರಕಿಸಬೇಕೆಂದು ಕೋರಿ ಮನವಿ ಪತ್ರವನ್ನು ಅರ್ಪಿಸಿದರು. ಈ ಬಗ್ಗೆ ನ್ಯಾಯಯುತ ಒಪ್ಪಂದವಾಗುವ ತನಕ ಎಲ್ಲಾ ಘಟಕಗಳ ಕಾರ್ಮಿಕರು ಕೆಲಸವನ್ನು ನಿಲ್ಲಿಸಲು ತೀರ್ಮಾನಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ

ಎಸ್. ಎಫ್. ಐ. ಐದನೇ ರಾಷ್ಟ್ರ ಸಮ್ಮೇಳನ

1984ರ ಜನವರಿ 22ರಿಂದ 27ರವರೆಗೆ ಪಶ್ಚಿಮ ಬಂಗಾಳದ 'ಡಂಡಂ' ನಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.)ನ ಐದನೇ ಅಖಿಲ ಭಾರತ ಸಮ್ಮೇಳನ ನಡೆಯುತ್ತದೆ.

ಇತ್ತೀಚೆಗೆ ಗ್ವಾಲಿಯರ್‌ನಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿಗಳ ಸಮಾವೇಶದ ಸಂದರ್ಭದಲ್ಲಿ ಜರುಗಿದ ಎಸ್. ಎಫ್. ಐ. ಕೇಂದ್ರ ಸಮಿತಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಯಿತು. ರಾಷ್ಟ್ರ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಡಿಸೆಂಬರ್ ತಿಂಗಳ ಒಳಗೆ ರಾಜ್ಯ ಸಮ್ಮೇಳನಗಳನ್ನು. ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ಜಿಲ್ಲಾ ಸಮ್ಮೇಳನಗಳನ್ನು ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಎಲ್ಲಾ ಶಾಖೆ ಸಮ್ಮೇಳನಗಳನ್ನು ನಡೆಸಲು ಕೇಂದ್ರ ಸಮಿತಿಯು ಕರೆ ನೀಡಿದೆ.

ಐದನೇ ರಾಷ್ಟ್ರ ಸಮ್ಮೇಳನದಲ್ಲಿ ಹತ್ತು ಲಕ್ಷ ಸದಸ್ಯರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ದಶಲಕ್ಷ ಸದಸ್ಯತ್ವನೊಂದಾವಣೆಯ ಗುರಿಯನ್ನು ಮುಟ್ಟಲು ಎಲ್ಲಾ ರಾಜ್ಯದಲ್ಲೂ ಸದಸ್ಯತ್ವ ಚಳುವಳಿಯನ್ನು ತೀವ್ರಗೊಳಿಸಲು ಎಸ್. ಎಫ್. ಐ. ಕೇಂದ್ರ ಸಮಿತಿಯು ಕರೆ ನೀಡಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K R. Road, Bangalore-4 Editor: P. RAMACHANDRARAO